ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೩, ಸಂಚಿಕೆ ೧೧, ಏಪ್ರಿಲ್ ೨೦೧೬

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿ ಸುದ್ದಿ ... ಪು. ೨

ಚಿಲುಮೆಯ ಒಳಗೆ

ಆರ್.ಕೆ.ಲಕ್ಷ್ಮಣ್ (ಲೇಖನ) ... ಪು. ೩

ರಾಂ ರಾಮ ... ಪು. ೪

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೧೧

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೨

ಚಿಲುಮೆಯ ಒಳಗೆ

ಪದ ಪುಂಜ/ರಂಗೋಲಿ ... ಪು. ೧೪

ಗುಡ್ಡದ ಭೂತ (ಹಾಸ್ಯ) ... ಪು. ೧೬

ಚಿಲುಮೆಯ ಒಳಗೆ

ಸ್ವಲಗ್ನ ಸಾವಧಾನ (ಕಥೆ) ... ಪು. ೧೭

ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೨೧

ಆರ್. ಕೆ. ಲಕ್ಷ್ಮಣ್ – ಲೇಖನ

ಪುಟ ೩

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಚಾಂದ್ರಮಾನ, ಸೌರಮಾನ ಪದ್ಧತಿಯ ಹೊಸವರ್ಷಾಚರಣೆಯು ಪ್ರಕೃತಿಯ ಬದಲಾವಣೆಗೆ ಒಂದು ಮಾರ್ಗದರ್ಶಿಯೇ ಸರಿ. ಆಸ್ಟ್ರೇಲಿಯಾ ಖಂಡಕ್ಕೆ ವಸಂತಮಾಸವನ್ನು ಈ ಹೊತ್ತಿನಲ್ಲಿ ಅಪೇಕ್ಷಿಸಲಾಗದಿದ್ದರೂ, ಈ ಹಬ್ಬಗಳು ತರುವ ನೆನಪುಗಳು ಎಲ್ಲರನ್ನು ಪುಳಕಿತರನ್ನಾಗಿಯಂತೂ ಮಾಡುತ್ತದೆ. ಆ ಬೆಳಗಿನ ಜಾವದ ಅಭ್ಯಂಜನ, ತೋರಣಗಳನ್ನು ಕಟ್ಟುವುದು, ಹೂವು, ಹಣ್ಣುಗಳನ್ನು ಪೂಜೆಗೆ ಅಣಿಮಾಡಿ, ಅವರವರ ಪದ್ಧತಿಯನುಸಾರ ಪೂಜೆ ಮಾಡಿ ಪ್ರಸಾದ ಸೇವಿಸುವುದು. ನಂತರದ ಒಬ್ಬಟ್ಟನ್ನೊಳಗೊಂಡ ಊಟ. ಬಂಧು ಮಿತ್ರರ ಹರಟೆ. ಆಹಾ! ಜೀವನದ ಸೊಬಗೇ ಒಂದು ಕ್ಷಣ ಕಣ್ಣಮುಂದೆ ಬಂದು ಹೋಗುತ್ತದೆ.

ಕೇವಲ ನಿಯಮಗಳಿಗೆ ಜೋತು ಬಿದ್ದು, ಹೀಗೆಯೇ ಮಾಡಬೇಕು ಎಂದು ಕಠಿಣರಾಗದೆ, ಬದಲಾವಣೆಗೆ ಹೊಂದಿಕೊಂಡು ಬೇಕಿರುವಲ್ಲಿ ಸಡಿಲಿಸಿ, ಜೀವನದಲ್ಲಿ ನೆಮ್ಮದಿ ಮುಖ್ಯ ಎಂದು ಮನಗಂಡಾಗ ಈ ಹಬ್ಬಗಳ ಆಚರಣೆ ಸಂಪೂರ್ಣವಾಗಿ ಒಂದು ನಿಯಮಿತದ ಪಂಥಕ್ಕೆ ಸೇರಿಕೊಳ್ಳದೆ, ಎಲ್ಲರೂ ಆಚರಿಸಬಹುದಾದ ಆನಂದೋತ್ಸವವಾಗುತ್ತದೆ. "ಆನಂದಂ ಬ್ರಹ್ಮ" ಎನ್ನುವುದು ಸಾರ್ಥಕವಾಗುತ್ತದೆ.

ಏಪ್ರಿಲ್ ಮೊದಲ ದಿನವೆಂದರೆ "ಮೂರ್ಖರ ದಿನ" ಎಂದೇ ಪ್ರಚಲಿತವಿರುವ ಫೂಲ್ಸ್ ಡೇ ಕೂಡ, ಕೇವಲ ಒಬ್ಬರನ್ನು ತುಚ್ಛವಾಗಿ ಹಾಸ್ಯ ಮಾಡಿ, ಅದರಿಂದ ನಾವು ನಗುವ ಹಬ್ಬವಾದರೆ, ಅದಕ್ಕೆ ಅರ್ಥವಿಲ್ಲ. ವ್ಯಂಗ್ಯ ಜೀವನದಲ್ಲಿ ಅವಶ್ಯಕ. ನಗುವಿಗಿಂತಲೂ ಎಷ್ಟೋ ಬಾರಿ ವ್ಯಂಗ್ಯದಿಂದ ಮಹತ್ತರವಾದ ಜೀವನದ ಪಾಠಗಳನ್ನು ಕಲಿತ ಉದಾಹರಣೆಗಳು ನಮ್ಮ ನಿಮ್ಮಲ್ಲಿ ಸಿಗುತ್ತವೆ. ಆದರೆ ಎಲ್ಲದ್ದಕ್ಕೂ ಒಂದು ಎಲ್ಲೆ ಇರಬೇಕು ಎನ್ನುವ ಹಾಗೆ, ಮಾಡುವ ಹಾಸ್ಯದಲ್ಲಿ ಒಂದು ಮಿತಿಯಿದ್ದಲ್ಲಿ ಅದು ಸಮಂಜಸ.

ಏಪ್ರಿಲ್ ತಿಂಗಳನ್ನು ನಗೆಮಾಸವೆಂದು ತಿಳಿದು, ಈ ನಿಟ್ಟಿನಲ್ಲಿ ನಡೆಸಿಕೊಡುವ ಹಾಸ್ಯ ಕಾರ್ಯಕ್ರಮಗಳನ್ನು ನಾವುಗಳೆಲ್ಲ ನೋಡಿ, ಅನಂದಿಸಿರುತ್ತೇವೆ. ಅಂತೆಯೇ ಅನೇಕ ಹಾಸ್ಯ ಬರಹಗಾರರೂ ತಮ್ಮ ಲೇಖನಿಯಿಂದ ನಿಮ್ಮನ್ನು ತಿವಿದು ತಿವಿದು ನಗೆಯುಕ್ಕಿಸುವಲ್ಲಿ ಹೊರನಾಡ ಚೆಲುಮೆಗೆ ತಮ್ಮ ಲೇಖನಗಳನ್ನು ಬರೆದುಕೊಡುತ್ತಿದ್ದಾರೆ. ಇದನ್ನು ನಡೆಸಿಕೊಡುವವರ ಪರಿಶ್ರಮವನ್ನು ನೆನೆಸಿಕೊಳ್ಳುತ್ತ, ಅವರನ್ನು ಸಾಧ್ಯವಾದಲ್ಲೆಲ್ಲ ಪ್ರೋತ್ಸಾಹಿಸೋಣ, ಅವರುಗಳ ನಗೆಹೊನಲು ನಮ್ಮ ನಿಮ್ಮೆಲ್ಲರಲ್ಲೂ ಸದಾ ಒಂದು ಕಿರುನಗೆ ಮೂಡಿಸುವಂತಾಗಲಿ ಎಂದು ಸಂಪಾದಕೀಯ ಸಮಿತಿಯ ಪರವಾಗಿ ಆಶಿಸುತ್ತೇನೆ. ನಲ್ಮೆಯ ಓದುಗರಿಗೆ ಯುಗಾದಿ ಹಬ್ಬದ ಶುಭಾಶಯಗಳು. ಬೇವೇ ಬರಲಿ, ಬೆಲ್ಲವೆ ಇರಲಿ, ನಗೆಯ ದೋಣಿ ಸಾಗಲಿ. ▪

ಎರಡು ತಿಂಗಳ ಪ್ರಮುಖ ದಿನಗಳು

ಏಪ್ರಿಲ್ ಶ್ರೀ ಮನ್ಮಥ/ದುರ್ಮುಖ ನಾಮ ಸಂವತ್ಸರ,
ಉತ್ತರಾಯಣ, ಶಿಶಿರ/ವಸಂತ ಋತು, ಫಾಲ್ಗುಣ/ಚೈತ್ರ ಮಾಸ

03 ಭಾ - ಪಾಪಮೋಚಿನಿ ಏಕಾದಶಿ
08 ಶು - ಚಾಂದ್ರಮಾನ ಯುಗಾದಿ, ಚೈತ್ರ ಮಾಸ, ವಸಂತ ಋತು, ಶ್ರೀ ದುರ್ಮುಖಿ ನಾಮ ಸಂವತ್ಸರ ಆರಂಭ
12 ಮಂ - ದೇವರ ದಾಸಿಮಯ್ಯ ಜಯಂತಿ, 14 ಗು – ಅಂಬೇಡ್ಕರ್ ಜಯಂತಿ/ ಸೌರ ಯುಗಾದಿ, 15 ಶು - ಶ್ರೀ ರಾಮ ನವಮಿ, 17 - ಕಾಮದಾ ಏಕಾದಶಿ,
19 ಮಂ - ಮಹಾವೀರ ಜಯಂತಿ,
21 ಗು - ಹಜರತ್ ಆಲಿ ಜನ್ಮ ದಿನ/ಚತುರ್ಥಿ-ಹುಣ್ಣಿಮೆ
22 ಶು - ಬೆಂ ಕರಗ/ಚಿತ್ರಾ ಪೂರ್ಣಿಮಾ/ಅಕ್ಕಮಹಾದೇವಿ ಜಯಂತಿ
25 ಸೋ - ಸಂಕಷ್ಟ ಚತುರ್ಥಿ

ಮೇ ಶ್ರೀ ದುರ್ಮುಖ ನಾಮ ಸಂವತ್ಸರ,
ಉತ್ತರಾಯಣ, ವಸಂತ ಋತು, ಚೈತ್ರ/ ವೈಶಾಖ ಮಾಸ

03 ಮಂ - ವರೂಥಿನಿ ಏಕಾದಶಿ
05 ಗು ಷದ್-ಎ-ಮೀರಜ್
06 ಶು – ಅಮಾವಾಸ್ಯೆ
07 ಶ - ವೈಷಾಖ ಮಾಸ ಆರಂಭ, 08 ಭಾ - ಮದರ್ಸ್ ಡೆ
09 ಸೋ - ಅಕ್ಷಯ ತದಿಗೆ, ಬಸವ ಜಯಂತಿ
10 ಮಂ - ರಾಮಾನುಜಾಚಾರ್ಯರ ಜಯಂತಿ
11 ಬು - ಶಂಕರ ಜಯಂತಿ
17 ಮಂ - ಮೋಹಿನೀ ಏಕಾದಶಿ
20 ಶು - ನೃಸಿಂಹ ಜಯಂತಿ
21 ಶ - ಹುಣ್ಣಿಮೆ/ಬುದ್ಧ ಪೂರ್ಣಿಮಾ
23 ಸೋ - ಷಬ್-ಎ-ಬರಾತ್/ನಾರದ ಜಯಂತಿ
25 ಬು - ಸಂಕಷ್ಟ ಚತುರ್ಥಿ

"ಆಪ್ತಮಿತ್ರ", "ದೃಶ್ಯ", "ಆಪ್ತ ರಕ್ಷಕ" ಚಿತ್ರಗಳನ್ನು ನಿರ್ದೇಶಿಸಿ ಈಗ ಶಿವರಾಜ್ ಕುಮಾರ್ ಅಭಿನಯದಲ್ಲಿ ಪಿ. ವಾಸು ಅವರ "ಶಿವಲಿಂಗ" ಚಲನಚಿತ್ರವು ಕುತೂಹಲ ಕೆರಳಿಸುವ ಥ್ರಿಲ್ಲರ್ ಚಿತ್ರ. ಸಿಡ್ನಿಯ ಚಿತ್ರರಸಿಕರಿಗೆ ಈ ಚಿತ್ರವನ್ನು ಬೆಳ್ಳಿತೆರೆಯ ಮೇಲೆ ನೋಡುವ ಅವಕಾಶ ಏಪ್ರಿಲ್ ೧೦ ರಂದು ಒದಗಿ ಬಂದಿತು.

ಆಗತಾನೆ ಮದುವೆಯಾದ ಸಿ ಐ ಡಿ ಅಧಿಕಾರಿಗೆ ಒಂದು ಕೊಲೆ ಕೇಸ್ ತನಿಖೆಗೆ ಕೊಡಲಾಗುತ್ತದೆ. ಆ ಪಾತ್ರದಲ್ಲಿ ನಾಯಕ ಶಿವಣ್ಣ ಅವರು ಹಿಂದಿನ ಕೆಲವು ಚಿತ್ರಗಳಿಗೆ ಹೋಲಿಸಿದರೆ ಚೆನ್ನಾಗೇ ಅಭಿನಯಿಸಿದ್ದಾರೆ. ಆತನ ಪತ್ನಿಯಾಗಿ ವೇದಿಕಾ ಉತ್ತಮ ಅಭಿನಯ ನೀಡಿದ್ದು ವಿಶೇಷ ಸನ್ನಿವೇಶಗಳಲ್ಲಿ ನೈಜ ಅಭಿನಯ ನೀಡಿದ್ದಾರೆ. ಚಿತ್ರಕ್ಕೂ ಅದರ ಹೆಸರಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಕ್ಯಾಮರಾ ಕೈಚಳಕ ಅದ್ಭುತವಾಗಿದೆ, ಹಾಡುಗಳು ಸನ್ನಿವೇಶಕ್ಕೆ ತಕ್ಕನಾಗಿವೆ, ಸಂಗೀತ ಹೊಸ ಅಲೆಯ ಬಿಸಿ ಇಲ್ಲದಿದ್ದರೂ ನೋಟಕ್ಕೆ ಚೆನ್ನಿದೆ. ಎರಡು ಪ್ರೀತಿಯ ಕಥೆಯನ್ನು ಆಧರಿಸಿ ತೆಗೆದಿರುವ ಈ ಚಿತ್ರದಲ್ಲಿ ಮುಸ್ಲಿಂ ಅಡುಗೆ ಭಟ್ಟನ ಕೊಲೆಯ ಹಿನ್ನೆಲೆಯಲ್ಲಿ ಆತನ ಪ್ರೇಯಸಿಯೇ ಕೇಸನ್ನು ಮುಂದುವರೆಸಿ ನ್ಯಾಯಕ್ಕಾಗಿ ಹೋರಾಡುತ್ತಾಳೆ. ನಟಿ ಊರ್ವಶಿ ಶಿವರಾಜ್ ತಾಯಿಯ ಪಾತ್ರದಲ್ಲಿ ಟಿ ವಿ ಯಲ್ಲಿ ಅಡುಗೆ ಶೋ ನಡೆಸಿಕೊಡುವ ಪಾತ್ರ ಮತ್ತು ಕಳ್ಳನಾಗಿ ಮನೆಗೆ ಬಂದು ಪ್ರೇತದ ಕೈಯಲ್ಲಿ ಒದೆ ತಿನ್ನುವ ಪಾತ್ರದಲ್ಲಿ ಸಾಧು ಕೋಕಿಲ ಚೆನ್ನಾಗಿ ಅಭಿನಯಿಸಿದ್ದಾರೆ. ಇನ್ನು ಅವಿನಾಶ್, ಮಾಳವಿಕಾ, ಅಶೋಕ ಸಣ್ಣ ಪಾತ್ರಗಳಾದರೂ ಮುಖ್ಯ ಪಾತ್ರಧಾರಿಗಳಾಗಿ ಒಳ್ಳೆಯ ಪೋಷಕ ನಟನೆ ನೀಡಿದ್ದಾರೆ. ಬಿಳಿಯ ಪಾರಿವಾಳ ಕಸ್ತೂರಿ ನಿವಾಸದ ನಂತರ ರಾಜಣ್ಣನ ಮಗ ಶಿವಣ್ಣನ ಚಿತ್ರದಲ್ಲಿ ಕಾಣಿಸಿದ್ದು ಅಂತ್ಯದವರೆಗೂ ಅದರ ಪಾತ್ರ ಮುಖ್ಯವಾಗೇ ಇದ್ದರೂ ನಿಜಜೀವನಕ್ಕೆ ಹತ್ತಿರವಾಗಿದೆಯೇ? ಎನ್ನುವುದು ನಂಬಲಾಗದ ಮಾತು.

ಇನ್ನು ದೊಡ್ಡ ತೆರೆಯಮೇಲೆ ಭಯಾನಕ ದೃಶ್ಯಗಳು ಬಂದಾಗ ಪ್ರೇಕ್ಷಕರ ಚೀತ್ಕಾರ ಮುಗಿಲು ಮುಟ್ಟುವಂತಿತ್ತು. ಕ್ಲೈಮ್ಯಾಕ್ಸ್ ದೃಶ್ಯ ಸ್ವಲ್ಪ ಬೇಗನೆ ಮುಗಿದರೂ ಚಿತ್ರೀಕರಣ ಮಾಡಿರುವ ಬಗೆ ಮೆಚ್ಚುವಂಥದ್ದು. ಇದೇ ಚಿತ್ರದ ಹೈಲೈಟ್ ಎನ್ನಬಹುದು. ಕಥೆಗೆ ತಿರುವು ರಾತ್ರಿಯ ಪ್ರೇತದ ಚಿತ್ರೀಕರಣ ಪ್ರೇಕ್ಷಕನನ್ನು ಕಣ್ಣರಳಿಸಿ ಕೂಡುವಂತೆ ಮೂಡಿಬಂದಿದೆ. ಐವತ್ತು ವರ್ಷ ದಾಟಿರುವ ಶಿವರಾಜ್ ಕುಮಾರ್ ಇನ್ನು ಮುಂದೆ ಡ್ಯಾನ್ಸ್ ಫೈಟ್ ಇಲ್ಲದೆ ಇಂಥಾ ವಿಭಿನ್ನ ಕಥೆಗಳಿಗೆ ಬೆಳ್ಳಿತೆರೆಯ ಅವಕಾಶ ನೀಡುವ ಸಿನಿಮಾ ನಿರ್ಮಾಣ ಮಾಡಬೇಕು. ▪

ಶಾಲಾ ಹೆಡ್ ಮಾಸ್ಟರರಾಗಿದ್ದರೂ ಲಕ್ಷ್ಮಣ್‌ರ ತಂದೆ ಪ್ರಾಯಕ್ಕೆ ಬಂದ ಹುಡುಗ ಲಕ್ಷ್ಮಣ್‌ರನ್ನು ಶಾಲೆಗೆ ಸೇರಿಸಲು ಮರೆತಿದ್ದರು. ಹೊತ್ತಲ್ಲದ ಹೊತ್ತಿನಲ್ಲಿ ಆಡುತ್ತಿದ್ದ ಹುಡುಗ ಲಕ್ಷ್ಮಣ್‌ನನ್ನು ಮದ್ರಾಸಿನಿಂದ ಬಂದ ಅವರ ನೆಂಟರು ಶಾಲೆಗೆ ಸೇರಿಸಿದ್ದರು. ಆದರೆ ರಂಪ ಮಾಡಿ ಅದೇ ದಿನ ಅವರು ಮನೆಗೆ ಹಿಂತಿರುಗಿದ್ದರು. ನಂತರ ಅವರನ್ನು ಶಾಲೆಗೆ ಸೇರಿಸಲು ಕೆಲ ತಿಂಗಳೇ ಬೇಕಾಯಿತು. ಆಗಲೂ ಅವರನ್ನು ಶಾಲೆಗೆ ಸೇರಿಸಿದ್ದು ಅವರ ಮನೆಗೆ ಬಂದ ಗೆಳೆಯರೊಬ್ಬರೇ. ಲಕ್ಷ್ಮಣ್‌ರ ತಂದೆಗೆ ಓದಿನ ಹುಚ್ಚು. ಚಿತ್ರಗಳು ತುಂಬಿದ ಹೊತ್ತಿಗೆಗಳು, ಸ್ಯಾಂಡ್, ಬೈಸ್ಟಾಂಡರ್, ವೈಡ್ ವರ್ಲ್ಡ್ ಟಿಟ್‌ಬಿಟ್, ಪಂಚ್ ಪತ್ರಿಕೆಗಳು ಅವರ ಮನೆಯಲ್ಲಿ ತುಂಬಿ ಹೋಗಿತ್ತು. ಲಕ್ಷ್ಮಣ್‌ರ ಹೆತ್ತವರು ತಮ್ಮ ಮಕ್ಕಳು ಕಡಿಮೆ ಮಾರ್ಕು ಪಡೆದಾಗ ಹಾಗೂ ಫೇಲ್ ಆದಾಗ ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಇಂತಹ ಸ್ವಚ್ಛಂದತೆ, ಪುಸ್ತಕ ಒಡನಾಟ, ಚಿಕ್ಕಪುಟ್ಟ ಮೆಚ್ಚುಗೆಗಳು ನನ್ನನು ವ್ಯಂಗ್ಯಚಿತ್ರಕಾರನನ್ನಾಗಿ ಮಾಡಿಸಿತು ಎಂದು ಲಕ್ಷ್ಮಣ್ ತಿಳಿಸುತ್ತಾರೆ.

ಲಕ್ಷ್ಮಣ್ ಶಾಲಾ ದಿನಗಳಲ್ಲಿ ಎಂದೂ ಸ್ಟೇಜ್ ಹತ್ತಿದವರಲ್ಲ. ಇಂತಹ ವ್ಯಕ್ತಿಯನ್ನು ಪ್ರಸಿದ್ಧ ವ್ಯಂಗ್ಯಚಿತ್ರಕಾರರಾಗಿರುವ ಕಾರಣ ಸಭೆಗೆ ಬಂದು ಭಾಷಣ ಮಾಡಿ ಎಂದು ಪೀಡಿಸಿದಾಗ ಅವರ ಪರಿಸ್ಥಿತಿ ಹೇಗಾಗಿರಬೇಡ. ಹಲವಾರು ಸುಳ್ಳು ಹೇಳಿ ಭಾಷಣಾಕಾಂಕ್ಷಿ ಸಂಸ್ಥೆಗಳಿಂದ ಲಕ್ಷ್ಮಣ್ ಅನೇಕ ಬಾರಿ ತಪ್ಪಿಸಿಕೊಂಡಿದ್ದುಂಟು. ಆದರೆ ಒಬ್ಬ ಜಾಣ ಭಾಷಣಾಕಾಂಕ್ಷಿ ನೀವು ಶಾಲೆಯ ಕಾರ್ಯಕ್ರಮಕ್ಕೆ ಬರಬೇಕು, ಏನೂ ಮಾತಾಡಬೇಡಿ ಬರೀ ಬಹುಮಾನ ವಿತರಣೆ ಮಾಡಿ ಎಂದು ಆಮಂತ್ರಣ ಕೊಟ್ಟ. ಭಾಷಣ ಮಾಡಲು ಚಲನಚಿತ್ರ ತಾರೆ ಇರುತ್ತಾರೆ ಎಂಬ ಮಾತನ್ನು ಹೇಳಿದ; ಲಕ್ಷ್ಮಣ್ ಒಪ್ಪಿಬಿಟ್ಟರು.

ಚಲನಚಿತ್ರ ತಾರೆಯೇ ಮಾತಾಡುವಾಗ ನಾನು ಸಭೆಗೆ ಕರೆದದ್ದಕ್ಕೆ ಧನ್ಯವಾದ ಹೇಳಬೇಕು. ಅದಕ್ಕಾಗಿಯಾದರೂ ಎರಡು ಮಾತಾಡದಿದ್ದರೆ ಹೇಗೆ ಎಂದು ಹಿಂದಿನ ರಾತ್ರಿಯೇ ಕನ್ನಡಿ ಎದುರು ಭಾಷಣ ಮಾಡಲಾರಂಭಿಸಿದರು. ಟೇಪ್ ರೆಕಾರ್ಡ್ ತಿರುಗಿಸಿದರು. ಸಭೆಯಲ್ಲಿ ಲಕ್ಷ್ಮಣ್ ತಾವು ಭಾಷಣ ಮಾಡುವುದು " ನಿಮ್ಮ ಹಲ್ಲು ಕೀಳುವುದನ್ನು ನೋಡಲು ನಾವು ಬರಬಹುದೇ" ಎಂಬ ಪರಿಸ್ಥಿತಿಗೆ ಸಮಾನವಾದದ್ದು ಎಂದರು ಸಭೆ ಗೊಳ್ಳೆಂದು ನಕ್ಕಿತು. ಚಪ್ಪಾಳೆ ತಟ್ಟಿತು. ಸಂತೋಷಗೊಂಡ ಲಕ್ಷ್ಮಣ್ ತಮ್ಮ ಬಗ್ಗೆ ಮೂವತ್ತು ನಿಮಿಷ ಮಾತಾಡಿದರು. ಮುಂದೆ ಒಂದೇ ವರುಷದಲ್ಲಿ ಎಲ್ಲಾ ಕ್ಲಬ್, ಅಸೋಸಿಯೇಷನ್, ಮೀಟಿಂಗ್, ಶಾಲಾ ಕಾಲೇಜಿನಲ್ಲಿ ಭಾಷಣ ಮಾಡಿ ಅವರ ಹಸಿವು ತಣಿಸಿದರು.

ಆರ್.ಕೆ. ಲಕ್ಷ್ಮಣ್, ಆರ್. ಕೆ ನಾರಾಯಣ್, ವ್ಯಂಗ್ಯಚಿತ್ರ ಲೋಕ, ಇಂಗ್ಲಿಷ್ ಸಾಹಿತ್ಯ ಲೋಕದಲ್ಲಿ ಸುಪ್ರಸಿದ್ಧರು. ಇಂತಹ ಮಕ್ಕಳನ್ನು ಹೆತ್ತು ಪೋಷಿಸಿದ ತನ್ನ ತಾಯಿಯನ್ನು ಲಕ್ಷ್ಮಣರು ಚಿತ್ರಿಸಿದ ಪರಿಯೂ ವಿಶಿಷ್ಟವಾದದ್ದು. - ನಾನು ಆರು ಗಂಡುಮಕ್ಕಳಲ್ಲಿ ಕೊನೆಯವನು. ತನ್ನ ತಾಯಿ ಟೆನ್ನಿಸ್, ಇಸ್ಪೀಟ್, ಚೆಸ್ ಆಟದಲ್ಲಿ ನಿಷ್ಣಾತೆ. ಆಕೆ ಮೈಸೂರಿನ ಮಹಾರಾಣಿ ಲೇಡೀಸ್ ಕ್ಲಬ್‌ನ ಸದಸ್ಯೆ. ವಾರಕ್ಕೆ ಒಂದೆರಡು ಬಾರಿ ಅಲ್ಲಿಗೆ ಹೋಗುತ್ತಿದ್ದರು. ಅಲ್ಲಿ ಮಹಾರಾಣಿಯ ಎದರು ಕಷ್ಟಪಟ್ಟು ಚೆಸ್ ಆಟದಲ್ಲಿ ಸೋಲುತ್ತಿದ್ದರು. ಆದಿನ ತಾಯಿಗೆ ಅರಮನೆಯಲ್ಲಿ ಊಟಕ್ಕೆ ಆಹ್ವಾನ ಇರುತ್ತಿತ್ತು. ಮನೆಗೂ ಸಿಹಿ ತಿಂಡಿ ಹಣ್ಣು ಹಂಪಲನ್ನು ಕಾರಿನಲ್ಲಿ ಮಹಾರಾಣಿ ಕಳುಹಿಸುತ್ತಿದ್ದರು. ಇದನ್ನು ಕಂಡು ಹೆಂಡತಿ ಮನೆಗೆ ತಡವಾಗಿ ಬಂದದ್ದಕ್ಕೆ ಸಿಟ್ಟುಗೊಂಡಿದ್ದ ತಂದೆ ಸಂತುಷ್ಟರಾಗುತ್ತಿದ್ದರು. ನನ್ನ ತಂದೆ ಅಸ್ವಸ್ಥರಾದಾಗ ತಾಯಿ ಮಹಾರಾಣಿ ಕ್ಲಬ್‌ಗೆ ಹೋಗುವುದನ್ನು ಕಮ್ಮಿ ಮಾಡಿದರು. ನನ್ನ ತಾಯಿಯೂ ಕಲಾವಿದೆ. ಆಕೆ ಬೆಳ್ಳಿ ಪದಕವನ್ನು ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಪಡೆದಿದ್ದರು. ನನ್ನ ತಂದೆಯ ವ್ಯಂಗ್ಯಚಿತ್ರವನ್ನು ನಾನು ನೆಲದ ಮೇಲೆ ಬರೆದಾಗ ತಂದೆ ಒರೆಸಿ ಹಾಕಲು ಹೇಳಿದರು. ತಾಯಿ ಅದಕ್ಕೆ ಅವಕಾಶ ಕೊಡದೇ ಇತರರಿಗೂ ತೋರಿಸಲು ಹೇಳಿದ್ದರು ಎಂದು ಲಕ್ಷ್ಮಣ್ ತಮ್ಮ ತಾಯಿಯನ್ನು ನೆನೆಯುತ್ತಾರೆ. ಕೆಲಸ ಸಿಕ್ಕಿದ ಸುದ್ದಿಯನ್ನು ತಾಯಿಯನ್ನು ಭೇಟಿಯಾಗಿ ತಿಳಿಸಿ ಲಕ್ಷ್ಮಣ್ ದಿ ಟೈಂಸ್ ಆಫ್ ಇಂಡಿಯಾಕ್ಕೆ ಸೇರಿದ್ದರು.

ಲಕ್ಷ್ಮಣ್‌ರಿಗೆ ಯಂತ್ರಗಳ ಬಗ್ಗೆ ಅತೀವ ಆಸಕ್ತಿ. ಅವರು ಸ್ವತ: ಗಡಿಯಾರವನ್ನು ರಿಪೇರಿ ಮಾಡಬಲ್ಲರು. ಸೈಕಲ್, ಕಾರುಗಳಲ್ಲೂ ಆಸಕ್ತಿ ಇರುವ ಇವರು ಬೇರೆ ದೇಶಕ್ಕೆ ಹೋದಾಗ ಅಲ್ಲಿಂದ ಗಡಿಯಾರವನ್ನು ತರದೆ ಇರುವುದಿಲ್ಲ. ಆದ್ದರಿಂದ ಅವರ ಚಿತ್ರಗಳಲ್ಲಿ ಯಂತ್ರದ ಚಿತ್ರಣವು ಸಮರ್ಪಕವಾಗಿರುತ್ತದೆ. ಇದು ಅವರು ಸೈನ್ಸ್ ಟು ಡೇ ಗೆ ಬರೆಯುತ್ತಿದ್ದ ವ್ಯಂಗ್ಯ ಚಿತ್ರಗಳಲ್ಲಿ ವ್ಯಕ್ತವಾಗುತ್ತಿತ್ತು.

ಮುಂದಿನ ಪುಟ ನೋಡಿ ...

We had a picnic under a tree in the park ಎಂಬ ಮಾಸ್ತರರ ವಾಕ್ಯಕ್ಕೆ ವಿದ್ಯಾರ್ಥಿಯೊಬ್ಬನ ಪ್ರಶ್ನೆ - ಸರ್ ಪಿಕ್‌ನಿಕ್ ಎಂದರೆ ಏನು. ತಡಬಡಿಸಿದ ಇಂಗ್ಲಿಷ್ ಮಾಸ್ತರರು ಅದೊಂದು ಹಣ್ಣು ಎಂದು ಹೇಳಿ ನುಣುಚಿಕೊಂಡರಂತೆ. ಈ ಉದಾಹರಣೆಯ ಮೂಲಕ ತಮ್ಮ ಬಾಲ್ಯವನ್ನು ಉದಾಹರಿಸುವ ಲಕ್ಷ್ಮಣ್ ನಮ್ಮ ಇಂಗ್ಲಿಷ್ ಮಾಸ್ತರ್ ಕ್ಲಿಷ್ಟಕರ ಪಾಠಗಳನ್ನು ಮಾಡುತ್ತಲೇ ಇರಲಿಲ್ಲ. ಅವೆಲ್ಲ ಪ್ರಮುಖವಲ್ಲ ಅಂತ ಹೇಳಿ ವಿದ್ಯಾರ್ಥಿಗಳನ್ನು ಸುಮ್ಮನಾಗಿಸಿಬಿಡುತ್ತಿದ್ದರು. ಇಂಗ್ಲಿಷ್ ಕಲಿಕೆಯ ಪ್ರಾಮುಖ್ಯತೆ ಅರಿತಿದ್ದ ಲಕ್ಷ್ಮಣ್ ತಮ್ಮ ಕುಟುಂಬ ವರ್ಗದಿಂದಲೇ ಇಂಗ್ಲಿಷ್‌ನ ಬುನಾದಿ ಸಿಕ್ಕಿತು ಎನ್ನುತ್ತಾರೆ. ಪ್ರಾಥಮಿಕ ಶಿಕ್ಷಣದ ಕನ್ನಡದ ಕೆಲ ಪಾಠಗಳನ್ನು ಮೆಲುಕು ಹಾಕುವುದನ್ನು ಅವರು ಮರೆಯುವುದಿಲ್ಲ. ಪುಣ್ಯಕೋಟಿಯ ಕಥೆ ಈಗಲೂ ಅವರಿಗೆ ಕಾಡುತ್ತದೆ. ಆದರೆ ಗಿಳಿಯು ಪಂಜರದೊಳಿಲ್ಲ ಎಂಬ ದು:ಖತಪ್ತ ಪದ್ಯವನ್ನು ಯಾವ ಶಿಕ್ಷಣ ತಜ್ಞ ಎಳೆ ಮಕ್ಕಳ ಪುಸ್ತಕದಲ್ಲಿ ತುರುಕಿದರು ಎಂದು ಲಕ್ಷ್ಮಣ್ ಅಸಮಾಧಾನ ವ್ಯಕ್ತಪಡಿಸುತ್ತಾರೆ. ಪಠ್ಯ ಪುಸ್ತಕದ ಅಂಚಿನಲ್ಲಿರುತ್ತಿದ್ದ ಖಾಲಿ ಜಾಗದಲ್ಲಿರುತ್ತಿದ್ದ ತಮ್ಮ ವ್ಯಂಗ್ಯ ಚಿತ್ರಕ್ಕೆ ಮಾಸ್ತರರೇ ತನಗೆ ರೂಪದರ್ಶಿಯಾಗಿದ್ದಾಗಿ ಹೇಳಿ ಕಣ್ಣು ಮಿಟುಕಿಸುತ್ತಾರೆ. ವಿದ್ಯಾರ್ಥಿ ಲಕ್ಷ್ಮಣ್ ಬರೆದ ಕೆಲವು ವ್ಯಂಗ್ಯಚಿತ್ರಗಳು ಹೀಗಿವೆ. ಇವು ಈ ಹಿಂದೆ ಕೊರವಂಜಿಯಲ್ಲಿ ಪ್ರಕಟವಾಗಿತ್ತು. (ಪುಟ ೫ ಮತ್ತು ೮ ರಲ್ಲಿ ಪ್ರಕಟವಾಗಿದೆ)

ನಮ್ಮ ರಾಜಕಾರಿಣಿಗಳ ಬಗೆಗೆ ಲಕ್ಷ್ಮಣ್ ಹೇಳುವ ಒಂದು ಮಾತು ಬಹು ಸ್ವಾರಸ್ಯಕರವಾಗಿದೆ. ರಾಜಕೀಯ ವ್ಯಂಗ್ಯಚಿತ್ರಗಳಲ್ಲಿ ಉತ್ಪ್ರೇಕ್ಷಿತ ಅಂಶವಿರುತ್ತದೆ. ಆದರೆ ಆ ಉತ್ಪ್ರೇಕ್ಷಿತ ಅಂಶವನ್ನೂ ಮೀರಿ ನಮ್ಮ ರಾಜಕಾರಿಣಿಗಳು ನಡೆದುಕೊಳ್ಳುವುದರಿಂದ ಇಂತಹ ವ್ಯಂಗ್ಯಚಿತ್ರಗಳು ತಮ್ಮ ಆಕರ್ಷಣೆ ಕಳೆದುಕೊಳ್ಳುತ್ತವೆ ಎಂಬುದು ಅವರ ಒಂದು ವ್ಯಾಖ್ಯಾನ.

ಬಾಲಕ ಲಕ್ಷಣ್‌ಗೆ ಲೆಕ್ಕದ ಪಾಠವೆಂದರೆ ಅಲರ್ಜಿ. ಅದಕ್ಕೊಬ್ಬ ಮಾಸ್ತರರು ಲಕ್ಷ್ಮಣ್‌ಗೆ ಸರಿಯಾಗೇ ಸಿಕ್ಕಿದ್ದರು. ಸದಾ ಗಂಟಿಕ್ಕಿದ ಮುಖ. ಅದಕ್ಕೆ ಹೊಂದಬೇಕೇನೋ ಅನ್ನುವ ಹಾಗೆ ಬಿಳಿ ಕೆಂಪು ಪಟ್ಟಿಯ ಅಂಗಿ. ಲಕ್ಷ್ಮಣ್‌ಗೆ ಅವರಲ್ಲಿ ಕಂಡದ್ದು ಝೂನಲ್ಲಿ ಕಂಡ ಹುಲಿಯ ಪ್ರತಿರೂಪ. ಶಾಲಾ ಪಾಠದ ಸಮಯದಲ್ಲಿ ನೋಟ್ ಬುಕ್‌ನ ಅಂಚಿನಲ್ಲಿ ಚಿತ್ರಣವಾದದ್ದು ಹುಲಿಯ ಚಿತ್ರ. ಆಕಸ್ಮಿಕವಾಗಿ ಮಾಸ್ತರರು ಅದನ್ನು ನೋಡಿದರು. ರಾಸ್ಕಲ್ ನನ್ನನ್ನು ತಮಾಷೆ ಮಾಡುತ್ತೀಯಾ ಎಂದು ಕಿವಿ ಹಿಂಡಿದರು. ಲಕ್ಷ್ಮಣ್ ಇದೊಂದು ನಿರುಪದ್ರವಿ ಹುಲಿಯ ಚಿತ್ರ ಸಾರ್ ಎಂದು ಗೋಗರೆದರು. ಈ ಘಟನೆಯನ್ನು ಉದಾಹರಿಸುವ ಲಕ್ಷ್ಮಣ್ ಇದು ನನಗೆ ವ್ಯಂಗ್ಯಚಿತ್ರಕಾರನಾಗಿ ಬೆಳೆಯಲು ಅನುಕೂಲವಾಯಿತು. ನಂತರ ಮನುಷ್ಯರ ಮುಖದಲ್ಲಿ ಹಳೆ ಕಟ್ಟಡ, ಔಷಧಿ ಅಂಗಡಿಯಲ್ಲಿರುವ ವಿಭಿನ್ನ ಬಾಟಲುಗಳು, ವಿಭಿನ್ನ ಮಾಡೆಲ್‌ನ ವಾಹನಗಳನ್ನು ಗುರುತಿಸಲು ಪ್ರಾರಂಭಿಸಿದೆ. ಇದು ಹುಚ್ಚು ನೋಟದ ವ್ಯಂಗ್ಯಚಿತ್ರಕಾರನಿಗೆ (ಮೂಲ ಹಾಸ್ಯಕ್ಕೆ ಧಕ್ಕೆ ಬಾರದಂತೆ) ಮಾತ್ರ ಸಾಧ್ಯ ಎಂದು ವಿವರಿಸುತ್ತಾರೆ. ಆರ್ ಕೆ ಲಕ್ಷ್ಮಣ್ ಅವರು ಉತ್ತರದಲ್ಲಿ ಲಾಲೂ ದಕ್ಷಿಣದಲ್ಲಿ ದೇವೇಗೌಡ ನನ್ನ ಫೇವರಿಟ್ ಎಂದು ತಿಳಿಸಿದ್ದರು.

ವ್ಯಂಗ್ಯಚಿತ್ರಕಾರನಿಗೆ ಜನ ಸಂಪರ್ಕ ಬೇಕು. ಹಾಗಂತ ಅವರೊಂದಿಗೆ ಬೆರೆತು ನನ್ನ ಸಮಯ ಹಾಳು ಮಾಡಿಕೊಳ್ಳಲು ಇಷ್ಟಪಡುವುದಿಲ್ಲ. ನಾನು ಜನರನ್ನು ನನ್ನದೇ ಫೇಸ್‌ನಲ್ಲಿ ನನ್ನದೇ ರೀತಿಯಲ್ಲಿ ಗಮನಿಸುತ್ತೇನೆ. ಕೊಲೆ ಬಗ್ಗೆ ಕಾದಂಬರಿ ಬರೆಯುವವನು ಒಂದು ಕೊಲೆ ಮಾಡಿಯೇ ಬರೆಯಬೇಕೇ? ಇನ್ನೊಬ್ಬರ ಮನಸ್ಥಿತಿಯನ್ನು ಅರಿವ ಕಲೆ ಇದ್ದರೆ ಸಾಕು. ನಾವೇ ಅವರಾಗಬೇಕಿಲ್ಲ ಎನ್ನುವುದು ಲಕ್ಷ್ಮಣ್‌ರ ಅಭಿಪ್ರಾಯ. ಲಕ್ಷ್ಮಣ್‌ರ ಶ್ರೀ ಸಾಮಾನ್ಯನಿಗೆ ಡಿಸೆಂಬರ್ 27, 2011 ಕ್ಕೆ 55 ವರ್ಷ ತುಂಬಿತು. ಶ್ರೀಸಾಮಾನ್ಯನನ್ನು ಪ್ರತಿ ಚಿತ್ರದಲ್ಲಿ ಅನಿವಾರ್ಯವಾಗಿಸಿ ಲಕ್ಷ್ಮಣ್ ತಮ್ಮ ಪಾಕೆಟ್ ವ್ಯಂಗ್ಯಚಿತ್ರವನ್ನು ಬರೆಯಲು ಯೋಜನೆ ಹಾಕಿಕೊಂಡಾಗ ಅವರೇ ಹೇಳುವ ಹಾಗೆ ಅವರಿಗೆ ಎದುರಾದ ಸಮಸ್ಯೆ ಎಂದರೆ ಶ್ರೀ ಸಾಮಾನ್ಯನಿಗೆ ಎಂತಹ ಉಡುಪು ಕೊಡಬೇಕು ಎನ್ನುವುದು. ಭಾರತೀಯರು ವಿಭಿನ್ನ ಪ್ರದೇಶದಲ್ಲಿ ವಿಭಿನ್ನ ಉಡುಪು ತೊಡುತ್ತಿರುವಾಗ ಎಲ್ಲರನ್ನೂ ಪ್ರತಿನಿಧಿಸುವುದು ಹೇಗೆ? ಆದರೆ ಲಕ್ಷ್ಮಣ್‌ಗೆ ಕಂಡಿದ್ದು ಎಲ್ಲ ಶ್ರೀ ಸಾಮಾನ್ಯರಿಗೆ ಸಾಮಾನ್ಯವಾಗಿರುವುದು ಮೂಕತನ ಎಂದು. ಅವರ ಶ್ರೀಸಾಮಾನ್ಯ ಎಂದೂ ಮಾತಾಡುವುದಿಲ್ಲ. ಅವರ ಎಲ್ಲಾ ಪಾಕೆಟ್ ವ್ಯಂಗ್ಯಚಿತ್ರ ಯು ಸೆಡ್ ಇಟ್‌ನಲ್ಲಿ ಆತ ಇರುತ್ತಾನೆ ಎಂಬುದನ್ನು ಓದುಗರು ಅರ್ಥೈಸಿಕೊಂಡಿದ್ದಾರೆ ಎಂದು ಅವರೇ ಹೇಳಿಕೊಂಡಿದ್ದಾರೆ. ಇಂತಹ ಶ್ರೀಸಾಮಾನ್ಯ ಅವರ ಕಲ್ಪನೆಗೂ ಮೀರಿ ಬೆಳೆದದ್ದು ಈಗ ಇತಿಹಾಸ. ಶ್ರೀ ಸಾಮಾನ್ಯನ ಕಾಲ್ಪನಿಕ ಆತ್ಮಚರಿತ್ರೆಯನ್ನು ಮರಾಠಿ ನಾಟಕಕಾರ ಅನಿಲ್ ಜೋಗ್ಳೇಕರ್ ಬರೆದಿದ್ದಾರೆ. ಅವರ ಮಗ ಗೌತಮ್ ಅದನ್ನು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಅದನ್ನು ನಾಟಕಕ್ಕೂ ಪರಿವರ್ತಿಸುವ ಕೆಲಸ ನಡೆದಿದೆ. ಶ್ರೀಸಾಮಾನ್ಯನನ್ನು ಆಧರಿಸಿ ಸಿನಿಮಾ ತಯಾರಾಗಿ ದೂರದರ್ಶನದಲ್ಲಿ ಪ್ರದರ್ಶಿತವಾಗಿದೆ. ಇತ್ತೀಚೆಗೆ ಎನ್.ಸಿ.ಆರ್.ಟಿ.ಯ ಪಠ್ಯ ಪುಸ್ತಕಕ್ಕೂ ಈ ಶ್ರೀ ಸಾಮಾನ್ಯನ ಚಿತ್ರ ಹೋಗಿದೆ. ಏರ್‌ಡೆಕ್ಕನ್‌ಗೆ ಲಾಂಛನವಾಗಿರುವ ಪುಣೆಯಲ್ಲಿ ಪ್ರತಿಮೆಯಾಗಿರುವ ಈ ಶ್ರೀ ಸಾಮಾನ್ಯನಿಗೆ ಪ್ರತಿಕ್ರಿಯೆ ಕೊಡಲು, ಆರ್.ಕೆ.ಲಕ್ಷ್ಮಣ್ ಮಾತನ್ನೇ ತುಂಬಿಲ್ಲ. ಈತ ಕೇವಲ ಮೂಕಪ್ರೇಕ್ಷಕ ಅಷ್ಟೆ.

ಮುಂದಿನ ಪುಟ ನೋಡಿ ...

ಲಕ್ಷ್ಮಣ್ ಟೈಂಸ್ ಆಫ್ ಇಂಡಿಯಾ ಸೇರಿದ್ದು 1952ರಲ್ಲಿ. ಮೊದಲಿಂದಲೂ ಅವರ ವ್ಯಂಗ್ಯಚಿತ್ರಕಲೆಗೆ ಸ್ಫೂರ್ತಿಯಾದದ್ದು ಡೇವಿಡ್ ಲೋ. ಒಂದು ದಿನ ಎಲ್ಲರಿಗಿಂತ ಮೊದಲು ಅಂದರೆ ಬೆಳಗಿನ 8.30ಕ್ಕೇ ಲಕ್ಷ್ಮಣ್ ಆಫೀಸಿಗೆ ಬಂದಿದ್ದರು. ಆಗಲೇ ಅವರ ಕೊಠಡಿಯಲ್ಲಿ ಒಂದು ವಿದೇಶಿ ದಂಪತಿಗಳು ಅವರಿಗಾಗಿ ಕಾಯುತ್ತಿದ್ದರು. ಅವರು ಸ್ವತ: ಡೇವಿಡ್ ಲೋ ದಂಪತಿಗಳು. ಚಿಕ್ಕಂದಿನಿಂದ ಸ್ಫೂರ್ತಿ ಪಡೆದಿದ್ದ ಡೇವಿಡ್ ಲೋ ದಂಪತಿಗಳು ಅವರೇ ಸ್ವತ: ದರ್ಶನ ಕೊಟ್ಟಿದ್ದು ಲಕ್ಷ್ಮಣ್‌ಗೆ ಆಶ್ಚರ್ಯ ತಂದಿತು. ಡೇವಿಡ್ ಲೋ ಮಗಳು ಹಾಂಕಾಂಗ್ ಉದ್ಯಮಿಯನ್ನು ಮದುವೆಯಾಗಿದ್ದಳು. ಹಾಗಾಗಿ ಮೂರು ವರ್ಷಕ್ಕೊಮ್ಮೆ ಲಂಡನ್ನಿನಿಂದ ಹಾಂಕಾಂಗ್‌ಗೆ ಲೋ ದಂಪತಿಗಳು ಹೋಗುತ್ತಿದ್ದರು. ಹಾಗೆ ಈ ಬಾರಿಯೂ ಹೊರಟಾಗ ಹಡಗು ಮುಂಬೈನಲ್ಲಿ ಕೆಲ ಗಂಟೆ ತಂಗಿತ್ತು. ಡೇವಿಡ್ ಲೋ ಮುಂಬೈ ಸುತ್ತುತ್ತಾ ಆಕಸ್ಮಿಕವಾಗಿ ಟೈಂಸ್ ಆಫ್ ಇಂಡಿಯಾ ಕಛೇರಿ ಎದುರು ಬಂದಿದ್ದರು. ಹಾಗೆ ಲಕ್ಷ್ಮಣ್ ರೂಮು ಸೇರಿದ್ದರು. ಲೋ ಅವರ ಈ ಭೇಟಿ ಲಕ್ಷಣ್ ಅವರಿಗೆ ಟೈಂಸ್ ಆಫ್ ಇಂಡಿಯಾ ಕಛೇರಿಯಲ್ಲಿ ಉನ್ನತ ಸ್ಥಾನ, ಗೌರವ ದೊರಕಿಸಿಕೊಟ್ಟಿತು. ಲಕ್ಷ್ಮಣ್‌ರಿಗೂ ತಮ್ಮ ಪತ್ರಿಕೆಯ ವತಿಯಿಂದ ಲಂಡನ್‌ಗೆ ಹೋಗಿ ಅಲ್ಲಿನ ವ್ಯಂಗ್ಯಚಿತ್ರಕಾರರನ್ನು ಭೇಟಿ ಮಾಡುವ ಅವಕಾಶ ದೊರೆಯಿತು (ಪತ್ರಿಕೆಯೇ ಎಲ್ಲ ಖರ್ಚು ಭರಿಸಿತು) ಗುರುವೇ ಶಿಷ್ಯನ ಬಳಿ ಬಂದು ಗೌರವ ತಂದುಕೊಟ್ಟಿದ್ದು ಲಕ್ಷ್ಮಣ್ ಬದುಕಿನ ಒಂದು ವಿಶೇಷ.

ಲಕ್ಷ್ಮಣ್ ಅನಿಮೇಟರ್ ಕೂಡಾ ಆಗಿದ್ದರು ಎನ್ನುವುದಕ್ಕೆ ಒಂದು ಉದಾಹರಣೆ ಇದೆ. ಲಕ್ಷಣ್ ಬಿ.ಎ ಫೈನಲ್ ಪರೀಕ್ಷೆ ಮುಗಿಸಿದ ಕೂಡಲೇ ವೃತ್ತಿಜೀವನಕ್ಕೆ ಕಾಲಿಟ್ಟಿದ್ದು ಕೀ ಅನಿಮೇಟರ್ ಆಗಿ. ಅದೂ ಮದ್ರಾಸ್‌ನಲ್ಲಿ. 250 ರೂಪಾಯಿ ತಿಂಗಳ ಸಂಬಳ. ಮೂರು ತಿಂಗಳ ಕಾಂಟ್ರಾಕ್ಟ್. ಈ ಅವಧಿಯಲ್ಲಿ ಅವರು ಸಿದ್ದ ಮಾಡಿದ್ದ ಕಥೆ ಹೀಗಿತ್ತು. ನಾರದ ಮುನಿ ಮೆಟ್ಟಿಲು ಇಳಿಯುತ್ತಾ ಕಾಲು ಜಾರಿ ಭೂಲೋಕದ ಕ್ಷೌರಿಕನ ಕುರ್ಚಿಯ ಮೇಲೆ ಕುಸಿದು ಬೀಳುತ್ತಾನೆ. ಆ ಕ್ಷೌರಿಕನಿಗೂ ಕುಳಿತವರು ಯಾರೆಂಬ ಅರಿವಿಲ್ಲದೆ ನಾರದರ ಕ್ಷೌರ ಮಾಡಿಬಿಡುತ್ತಾನೆ. ಈ ಸನ್ನಿವೇಶವನ್ನು ಹಲವು ಕೀ ಡ್ರಾಯಿಂಗ್‌ನಲ್ಲಿ ಸೆರೆ ಹಿಡಿದು ಲಕ್ಷ್ಮಣ್ ಕೆಲಸ ಗಿಟ್ಟಿಸಿಕೊಂಡಿದ್ದರು. ಇದು ನಡೆದದ್ದು ಸುಮಾರು 60 ವರ್ಷಗಳಿಗೂ ಹಿಂದೆ.

(ಗ್ರಂಥ ಋಣ - ವ್ಯಂಗ್ಯಚಿತ್ರಕಾರ ವಸಂತ ಹೊಸಬೆಟ್ಟು ಅವರ ಪುಸ್ತಕ “ಮುಂದುವರೆದ ವಾರೆವ್ಹಾ”)

(ಲಿಮ್ಕಾ ದಾಖಲೆಗೆ ಸೇರಿದ ಅಂಕಣ ಬರಹಗಳ ಸಂಕಲನ) ▪

ಮಹಾತ್ಮಾ ಗಾಂಧಿಯವರ ಮೇಲ್ಪಂಗ್ತಿಯನ್ನೇ ಜಾಜೂ ತಪ್ಪದೆ ಅನುಸರಿಸುತ್ತಿದ್ದೇವೆ ಎಂದು ಹೇಳಿಕೊಳ್ಳುವ ಹಲವರು ಅವರಂತೆ ವಾರಕ್ಕೊಂದು ದಿನವಾದರೂ ಮೌನವಾಗಿರಬಾರದೇ ಅನ್ನಿಸುತ್ತದೆ.



ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ನೋಟಿನ್ಮೇಲಾಸೆ, ಒಬ್ಬಟ್ಟಿನ್ಮೇಲ್ ಪ್ರೀತಿ!

ದುರ್ಮುಖಿ ಸಂವತ್ಸರದ ಮೊದಲ ದಿನ. ಹಸನ್ಮುಖಿಯಾದ ಹೆಂಡತಿ ಆಗತಾನೇ ನೀರೆರೆದುಕೊಂಡು ಬಂದಿದ್ದಳು. ಹೆರಳಿನಿಂದ ತೊಟ್ಟಿಕ್ಕುತ್ತಿದ್ದ ನೀರ ಹನಿಗಳನ್ನೇ ದಿಟ್ಟಿಸುತ್ತಾ 'ವರ್ಷಾವಧಿ ಹಬ್ಬ ಬಂತು. ಎಣ್ಣೆನೀರು ಹಾಕ್ಕೋತೀನಿ' ಎಂದೆ.

'ಜಯಲಲಿತೆಯ ಬಳಿ ಎರಡು ಬಕೆಟ್ ನೀರು ಸಾಲ ತನ್ನಿ' ಎನ್ನುತ್ತಾ ಬಕೆಟ್ ಮುಂದಿತ್ತಳು.

'ನೀನು ಮಾತ್ರ ಸ್ನಾನ ಮಾಡಿ ನನಗೆ ನೀರಿಲ್ಲ ಅನ್ನೋದು ಸರೀನಾ?'

'ಸ್ನಾನಕ್ಕಿದೆ. ಅಭ್ಯಂಜನಕ್ಕಿಲ್ಲ. ನೀರು ಉಳಿಸಿ ಅನ್ನೋದನ್ನ ಕೇಳಿ ಪಕ್ಕದ್ಮನೆ ರಾಬರ್ಟ್ ಅಂಕಲ್ ರಮ್ಗೆ ಸೋಡಾನೇ ಮಿಕ್ಸ್ ಮಾಡ್ಕೋತಿದಾರೆ. ನೀರು ಉಳಿಸಬೇಕೂಂತ ರುದ್ರಾಚಾರಿ ವಾರಕ್ಕೊಂದು ದಿನ ಸ್ನಾನ ಮಾಡಿದರೆ ಸಾಲದೆ ಅಂತ ಕೇಳ್ತಿದ್ರು.'

'ಅವರಿವರಿರಲಿ. ನಮ್ಮ ಮಕ್ಕಳು? ಪುಟ್ಟೀಗೆ ಇವತ್ತಾದರೂ ಎಣ್ಣೆನೀರೂ...'

'ಛಿ! ಹರಳೆಣ್ಣೆ ಇಟ್ಕೊಂಡ್ರೆ ಅವಳಿಗೆ ಸೈನಸೈಟಿಸ್ ಆಗತ್ತೆ'

'ಓಹ್! ಹೋಗಲಿ ಬಿಡು. ಕುಮಾರ ಕಂಠೀರವ?'

'ಸೀಗೆಕಾಯಿ ಹಾಕಿಕೊಂಡರೆ ಅಲರ್ಜಿ ಆಗಿ ಮೂರು ಸೋರುವಿಕೆ ನಿಲ್ಸಕ್ಕೆ ಪ್ಲಂಬರ್ನೇ ಕರೀಬೇಕಾಗತ್ತೆ'

ಅಲ್ಲಿಗೆ ಯುಗಾದಿಯ ಪ್ರಮುಖ ಅಂಗಗಳಲ್ಲಿ ಒಂದಾದ ಅಭ್ಯಂಜನ ಸ್ನಾನಕ್ಕೆ ತೆರೆ ಬಿತ್ತು.

'ಒಬ್ಬಟ್ಟು?' ಮೂಗೆಳೆದೆ.

'ಪುಟ್ಟಿ ಡಯಟ್; ಕುಮಾರಕಂಠೀರವನಿಗೆ ಒಬ್ಬಟ್ಟಿನಲ್ಲಿನ ಜಿಡ್ಡು ತಿಂದರೆ ಮೊಡವೆಗಳ ಸಾಲುಸಾಲು'

'ನನಗೆ?'

ನನ್ನವಳ ಕಣ್ಣು ನನ್ನ ಹೊಟ್ಟೆಯ ಸುತ್ತಳತೆಯನ್ನು ಅರ್ಥಗರ್ಭಿತವಾಗಿ ಸರ್ವೇ ಮಾಡಿತು. ಯುಗಾದಿಯ ಎರಡನೆಯ ಪ್ರಮುಖ ಅಂಗವಾದ ಒಬ್ಬಟ್ಟೂ ಇಲ್ಲ.

ಮನೆಯೊಳಿಲ್ಲವಾದುದು ಹೊರಗಡೆ ದೊರಕದೆ? ಸೀನುವಿನ ಹೆಂಡತಿ ನಿಂಗಿ ಸಿಹಿತಿಂಡಿಯಲ್ಲಿ ಎಕ್ಸ್ ಪರ್ಟ್ ಆದುದರಿಂದಲೇ ಸೀನಿಂಗಿ ಎಂದು ಹೆಸರು ಪಡೆದವಳು. ತಲೆಯೊಳ್ ಒಬ್ಬಟ್ಟಿನ ಚಿತ್ರಣ ಮೂಡಿರೊಳ್, ನಾಲಿಗೆಯೊಳ್ ರಸ ಒತ್ತರಿಸಿ ಬರುತಿರಲ್, ಆರ್ ರಿವಾಲ್ವರ್ ಇಟ್ಟೊಡಂ ನೆನೆವುದೆನ್ನ ಮನಂ ಸೀನಿಂಗಿ ಒಬ್ಬಟ್ಟಂ.

ಸೀನುವಿನ ಮನೆಯೊಳಗಿಂದ ಜೋಡಿವಾಲಗ ಮೊಳಗುತ್ತಿತ್ತು.

'ಮುಝಿ ನೀಂದ್ ನ ಆಯೇ' ಅಳುತ್ತಿದ್ದ ಸೀನು.

'ಮುಝಿ ಚೈನ್ ನ ಆಯೇ' ಒರಲುತ್ತಿದ್ದಳು ಸೀನಿಂಗಿ

'ಏನಾಯ್ತೋ?' ಎಂದೆ.

'ರಾತ್ರಿಯೆಲ್ಲ ನಿದ್ರೆ ಇಲ್ಲ' ಸೀನು ನುಡಿದ.

'ಚೈನ್ ತಂದ್ಕೊಡ್ತೀನಿ ಅಂದಿದ್ರಿ. ನನಗೆ ಚೈನ್ ಬರೋವರ್ಗೂ ನಿಮಗೆ ನಿದ್ದೆ ಬರಲ್ಲ' ಎಂದಳು ಸೀನಿಂಗಿ. ಆಹಾ! ದುರ್ಮುಖಿ ಸಂವತ್ಸರದ ಆರಂಭಕ್ಕೆ ಇದಕ್ಕಿಂತಲೂ ದುರ್ಮುಖ ಬೇಕೆ?

'ಹೇಳಿದ್ಮೇಲೆ ತಂದ್ಕೊಡೋದಲ್ವೇನೋ ಸೀನೂ...?' ಸೀನಿಂಗಿಯ ಒಬ್ಬಟ್ಟಿನ ಪರ ವಕಾಲತ್ತು ವಹಿಸಿದೆ.

'ಟೈಲರ್ರು, ಪ್ಲಂಬರ್ರು, ಜ್ಯುಯೆಲರ್ರು ಯಾವತ್ತಾದ್ರೂ ಟೈಮಿಗೆ ಸರಿಯಾಗಿ ಕೊಟ್ಟಾರೇನೋ? ಸಿಎಮ್ಮಿನ ಹೂಬ್ಲೋಟ್ ವಾಚ್ ಕೊಟ್ಟರೂ ಟೈಮಿಗೆ ಮರ್ಯಾದೆ ಕೊಡಲ್ಲ ಅವರು. ಆರ್ಡರ್ ಪ್ಲೇಸ್ ಮಾಡಿದ್ದೆ. ಬಾ, ಇಬ್ಬರೂ ಹೋಗಿ ತರೋಣ.'

'ತೆಗಿ ಬೈಕ್ ಹೊರಕ್ಕೆ'

'ಕ್ಷಮಿಸು ಡಿಯರ್ ಬಾಯ್. ಸೆಕೆಂಡ್ ಹೆಲ್ಮೆಟ್ ಇಲ್ಲ'

'ನಿನ್ನ ಹೆಂಡತಿಯನ್ನ ಕರ್ಕೊಂಡ್ಹೋಗೋವಾಗ ಏನ್ಮಾಡ್ತೀಯೋ?'

'ನಾನೊಬ್ಬಳೇ ಹೆಲ್ಮೆಟ್ ಹಾಕ್ಕೋತೀನಿ. ತಲೆ ಇಲ್ಲದವರಿಗೆ ಹೆಲ್ಮೆಟ್ ಯಾಕೆ?' ಮೂರನೆಯ ಮಹಾಯುದ್ಧದ ಕಹಳೆಯಂತಿತ್ತು ಸೀನಿಂಗಿಯ ದನಿ.

ಮುಂದಿನ ಪುಟ ನೋಡಿ ...

ಮೂಲೆಗೆ ಬಂದೆವು. ಹಣೆಯಲ್ಲಿ ಕುಂಕುಮ ಇಟ್ಟುಕೊಂಡಿದ್ದ ಆಟೋ ಡ್ರೈವರೊಬ್ಬ 'ಎಲ್ಲಿಗೆ ಸಾರ್?' ಎಂದ. ಆ ಕುಂಕುಮದ ಕೆಂಪು ಡೇಂಜರ್ ಸಿಗ್ನಲ್ ಎಂದು ನನಗೆ ಹೊಳೆಯಲಿಲ್ಲ. ಆಟೋ ಏರಿದೆವು. ಓದುಗ ಮಹಾಶಯಾ, ಮುಂದಿನ ಕೆಲವು ನಿಮಿಷಗಳನ್ನು ಏನೆಂದು ವರ್ಣಿಸಲಿ. ಜಯಂಟ್ ವೀಲ್, ಟಾಪ್ಸಿ ಟರ್ವಿ, ರೋಲರ್ ಕೋಸ್ಟರ್ ಎಲ್ಲದರ ಕೊಲಾಬರೇಶನ್ನಿನಂತೆ ಚಲಿಸಿದ ಆಟೋದ ಓಟಕ್ಕೆ ನನ್ನ ಸ್ಪಾಂಡಿಲೈಟಿಸ್ ವಾಸಿಯಾಯಿತು. ಹಲವಾರು ದಿನಗಳಿಂದ ಹೊರಳಿದ್ದ ಸೀನುವಿನ ಕಾಲಿನ ನರಗಳು ನೇರವಾದವು. ಸ್ಲಿಪ್ಡ್ ಡಿಸ್ಕ್ ಆಗಿದ್ದ ನನ್ನ ಲಂಬರ್ ಪ್ರದೇಶವೂ ನೆಟ್ಟಗಾಯಿತು. ಹಿಮಪರ್ವತದ ಶಿಖರದಲ್ಲಿ ನೇರವಾಗಿ ಕುಳಿತ ಶಿವನ ಭಂಗಿಯಲ್ಲಿ ನನಗೆ ಕೂಡಲು ಸಾಧ್ಯವಾಗಿ ಹರ್ಷಾತಿರೇಕದಿಂದ ಕಿರುಚಿದೆ. ನಾನು ಕಿರುಚಿದ್ದು ಭಯದಿಂದ ಎಂದುಕೊಂಡು ರಿಕ್ಷಾದವ ಸಡನ್ ಬ್ರೇಕ್ ಹಾಕಿದ. ಸ್ಲಿಪ್ಡ್ ಡಿಸ್ಕ್, ಸ್ಪಾಂಡಿಲೈಟಿಸ್, ಹೊರಳಿದ ನರಗಳು ಸ್ವಸ್ಥಾನ ಸೇರಿದವು! ಮೂಗಿನ ತುದಿಯ ಶೇಪ್ ಬದಲಾಯಿತು.

ಆಹಾ! ನಿಜಕ್ಕೂ ಆ ಆಟೋದವನ ಓಟವನ್ನು ಕವಿ ಕೆ.ಎಸ್.ನರಸಿಂಹಸ್ವಾಮಿಗಳು ನೋಡಿದ್ದಿದ್ದರೆ

ಅತ್ತಿತ್ತ ನೋಡದಿರು ಒತ್ತಿ ಬ್ರೇಕ್ ಹಿಡಿಯದಿರು
ಮುಂದೆ ಇರುವರು ಬೆಚ್ಚಿ ಜರುಗೋ ಹಾಗೆ ಗೋ ಗೋ ಗೋ ಗೋ
ಸಂದುಗಳ ತೂರುತಿರು ಎಡಬಲ ನೋಡದಿರು
ಬೈಕು ಕಾರುಗಳ ಮಧ್ಯೆ ತೂರಿ ಚಲಿಸು ಗೋ ಗೋ ಗೋ ಗೋ

ನುಗ್ಗು ಮೂಚಕ್ರದ ಸಿರಿಯೆ ನುಗ್ಗು ಒಡ್ಡೋಟದ ದೊರೆಯೆ
ಚಲಿಸು ವೃದ್ಧರ ಪಡೆಯು ಬೆದರುವಂತೆ
ಇಳಿಸಿ ಹಳ್ಳದ ಒಳಗೆ ಹಾರಿ ಹಂಪಿನ ಹೊರಗೆ
ಹಾಕಿ ಮೀಟರು ನೂರು ದಾಟುವಂತೆ ಗೋ ಗೋ ಗೋ ಗೋ

ಜನಗಳು ನಿನಗಾಗಿ ದಾರಿ ಕಾಯುವರಂತೆ
ಮಕ್ಕಳು ಲಗೇಜನ್ನು ಕೈಯಲಿ ಹಿಡಿದು;
ಎಕ್ಸ್ ಟ್ರಾ ನೀಡುವರಂತೆ ಡಬ್ಬಲ್ ನೀಡುವರಂತೆ
ದಮ್ಮಯ್ಯ ಎನ್ನುವರು ಸೇರಿಸು ಮನೆಗೆ



ಬಣ್ಣಬಣ್ಣದ ಕನಸು ಕರಗುವುದು ಬಲುಬೇಗ
ವೋಲಾ ಟ್ಯಾಕ್ಸಿ ಬಂತು ಆಟೋ ನಡುವೆ
ಮೆಟ್ರೊಹೊರಹಾದಿಯಲಿ ನಿನ್ನ ಕಳಿಸುವರಾಗ
ಪಟ್ಟು ಸಡಿಲಿಪೆ ಆಗ ಆಟೋ ದೊರೆಯೆ

ಅತ್ತಿತ್ತ ನೋಡದಿರು ಒತ್ತಿ ಬ್ರೇಕ್ ಹಿಡಿಯದಿರು
ಮುಂದೆ ಇರುವರು ಬೆಚ್ಚಿ ಜರುಗೋ ಹಾಗೆ
ಗೋ... ಹೋಗ್ಹೋಗೋ... ಹೋಗ್ಹೋಗೋ... ಹೋಗ್ಹೋಗೋ..

ಎಂದು ಬರೆದಿರುತ್ತಿದ್ದರೇನೋ. 'ಸೀನೂ, ಯುಗಾದಿಯಂದು ನಾವು ಯಾರಿಗಾದರೂ ಶುಭ ಹಾರೈಸಬೇಕಾದರೆ ಏನೆಂದು ಹೇಳಬೇಕು ಗೊತ್ತೇನೋ?' ಎಂದೆ.

'ಏನು?'

'ರಿಕ್ಷಾದಿಂದ ಅಂತರಿಕ್ಷದವರೆಗೆ ಇರುವ ಎಲ್ಲರಿಗೂ ಶುಭವಾಗಲಿ ಅನ್ನಬೇಕು'

'ಹಾಗೆಂದರೆ ಏನು?'

'ಜೀವನವೆಂಬ ಅಡ್ಡಾದಿಡ್ಡಿ ಆಟೋದಲ್ಲಿ ಕುಳಿತು ಪ್ರಯಾಣಿಸಿದರೂ ಮೂಳೆ ಮುರಿದುಕೊಳ್ಳದೆ ಮೂಲ ತಲುಪು ಅನ್ನುವುದೇ ಹಾರೈಕೆಯ ಫಸ್ಟ್ ಹಾಫು'

'ಅಂತರಿಕ್ಷ?'

ಮುಂದಿನ ಪುಟ ನೋಡಿ ...

‘ಮೊಬೈಲು, ಇಂಟರ್ನೆಟ್ಟು, ಸ್ಕೈಪು, ಇವೆಲ್ಲವೂ ಸ್ಯಾಟಿಲೈಟಿಂದಲೇ ಬರೋದಲ್ಲವೇನಯ್ಯಾ. ಮೊಬೈಲಲ್ಲಿ ಕಾಲ್ ಡ್ರಾಪ್ ಆಗದೆ, ಇಂಟರ್ನೆಟ್ನಲ್ಲಿ ಬ್ಯಾಂಕ್ ಅಕೌಂಟ್ ಹ್ಯಾಕ್ ಆಗದೆ, ಸ್ಯಾಟಿಲೈಟ್ ಮೂಲಕ ಹರಿದುಬರೋ ಸೀರಿಯಲ್ಲುಗಳ ಗೋಳನ್ನ ತಡೆಯೋ ಶಕ್ತಿ ಈ ವರ್ಷದಲ್ಲಿ ಎಲ್ಲರಿಗೂ ಇರಲಿ ಅನ್ನೋದೇ ಹಾರೈಕೆಯ ಸೆಕೆಂಡ್ ಹಾಫು’

ರಿಕ್ಷಾ ನಿಂತಿತು. ತಲೆಯೆತ್ತಿ ನೋಡಿದೆ. ಸೀರೆಗಳ ಷೋರೂಂ!

‘ಚೆನ್ನ?’

‘ಏಪ್ರಿಲ್ ತಿಂಗಳಲ್ಲಿ ಇಷ್ಟೂ ಫೂಲ್ ಮಾಡದಿದ್ದರೆ ಆದೀತೇ? ಬಾ, ಸೀರೆ ತೆಕ್ಕೊಡು’

‘ತೆಕ್ಕೊಡು?’

‘ಟ್ಯಾಕ್ಸ್ ಡಿಡಕ್ಟ್ ಆಗಿ ನನಗೆ ಈ ತಿಂಗಳು ಉಳಿದದ್ದು ಕೇವಲ ಸ್ಯಾಲರಿ ಸ್ಲಿಪ್ ಒಂದೇ. ಸಾಲ ಕೊಡು’ ನಕ್ಷತ್ರಕನ ಪೋಸ್‌ನಲ್ಲಿ ಸೀನು!

ಆಗ... ಆ ಕ್ಷಣದಲ್ಲಿ

ಫಮಫಮಿಸುತ್ತಿರುವ ಸೀನಿಂಗಿಯ ಒಬ್ಬಟ್ಟಿನ ಚಿತ್ರ ಮನದ ಒಂದು ಕಡೆಯಿಂದ ಮೂಡಿಬಂತು.

ಪರ್ಸಿನಿಂದ ಪರ್ಮನೆಂಟಾಗಿ ಹಾರಿಹೋಗುತ್ತಿರುವ ನೋಟುಗಳ ಚಿತ್ರ ಮನದ ಇನ್ನೊಂದು ಕಡೆಯಿಂದ ಮೂಡಿಬಂತು.

ದುಡ್ಡು ಕೊಟ್ಟರೆ ಹಸನ್ಮುಖಿ ಸತಿ ದುರ್ಮುಖಿಯಾಗುತ್ತಾಳೆ.

ಕೊಡದಿದ್ದರೆ ಚೈನಿಲ್ಲದೆ ಸೀನಿಂಗಿ ದುರ್ಮುಖಿಯಾಗುತ್ತಾಳೆ.

ನೋಟಿನ್ಮೇಲಾಸೆ; ಒಬ್ಬಟ್ಟಿನ್ಮೇಲ್ ಪ್ರೀತಿ!

ಜೇಬಿನಿಂದ ರೂಪಾಯಿ ನಾಣ್ಯ ತೆಗೆದು ಟಾಸ್ ಹಾಕಿದ್ದೇನೆ. ಹೆಡ್ ಬಿದ್ದರೆ ಒಬ್ಬಟ್ಟು, ಟೈಲ್ ಬಿದ್ದರೆ ಒಬ್ಬಟ್ಟಿನಾಸೆ ಒತ್ತಟ್ಟು.

ನಾಣ್ಯ ಕೆಳಗೆ ಬಿದ್ದಮೇಲೆ ನನ್ನ ನಿರ್ಧಾರ ತಿಳಿಸ್ತೀನಿ. ಅಲ್ಲಿಯವರೆಗೆ...

ವಿಷ್ ಯೂ ಆಲ್ ಎ ಹ್ಯಾಪಿ ದುರ್ಮುಖಿ ಸಂವತ್ಸರ. ಬೈ.... ▪

"ಹೈದರಾಲಿ ಮರಣಹೊಂದಿದ್ದು
ಯಾವ ಕದನದಲ್ಲಿ ?"
"ಅವನ ಕೊನೆಯ ಕದನದಲ್ಲಿ "

ಇನ್ನೂ ಮನೆ ಕಟ್ಟಿಸುಕ್ಕೇ ಇಲ್ಲ ಆಗಲೇ
ಮಿಲಿಟರಿಯವರು ' ನಮಗೆ ಬೇಕು '
ಎಂದು ಹುಕುಂ ಹೊರಡಿಸಿ ತಲೆಮೇಲೆ
ಕಲ್ಲು ಹಾಕುತ್ತಾರಲ್ರೀ

ವಿಚಾರ ವಿಹಾರ

ಮಾಲು, ಅಡಿಲೈಡ್

ಶನೈ ಪಂಥಾಃ ಶನೈ ಕಂಥಾಃ ಶನೈ ಪರ್ವತ ಲಂಘನಂ
ಶನೈರ್ವಿದ್ಯಾ ಶನೈರ್ವಿತ್ತಂ ಪಂಚೈತಾನಿ ಶನೈ ಶನೈ

ಮೇಲಿನ ಸಾಲುಗಳು ಶುಭಾಷಿತದಿಂದ ಆಯ್ದದ್ದು.

ಇದರ ಅರ್ಥ?!

ನಿಧಾನಿಸು

ನಿಧಾನವಾಗಿ ದಾರಿಯಲ್ಲಿ ಸಾಗಬೇಕು, ನಿಧಾನವಾಗಿ ಭಾರವನ್ನು ಹೊರಬೇಕು ನಿಧಾನವಾಗಿ ಪರ್ವತವನ್ನು ಏರಬೇಕು. ನಿಧಾನವಾಗಿ ವಿದ್ಯೆಯನ್ನು ಕಲಿಯಬೇಕು ನಿಧಾನವಾಗಿ ಹಣವನ್ನು ಸಂಪಾದಿಸಬೇಕು. ಈ ಐದು ಕ್ರಿಯೆಗಳು ಮಾಡುವಾಗ ನಿಧಾನ ನಿಧಾನ.

ಮೊದಲನೆಯದು ಶನೈ ಪಂಥಾಃ. ದಾರಿಯಲ್ಲಿ ವೇಗವಾಗಿ ಓಡದೆ ನಿಧಾನವಾಗಿ ಕ್ರಮಿಸಿದರೆ ಎಡವಿ ಗಾಯ ಮಾಡಿಕೊಳ್ಳುವುದನ್ನು ತಡೆಹಿಡಿಯಬಹುದು.

ಎರಡನೆಯದು ಶನೈ ಕಂಥಾಃ. ಬಹಳ ಭಾರವಾದ ವಸ್ತುಗಳನ್ನು ದಿಢೀರ್ ಎಂದು ಎತ್ತದೆ ನಿಧಾವಾಗಿ ಎತ್ತಿದರೆ ಉಳುಕಿಸಿಕೊಳ್ಳದೆ ಸೊಂಟವನ್ನು ಕಾಪಾಡಿಕೊಳ್ಳಬಹುದು

ಮೂರನೆಯದು ಶನೈ ಪರ್ವತ ಲಂಘನಮ್. ಬೆಟ್ಟ ಗುಡ್ಡ ಪರ್ವತಗಳನ್ನು ಹತ್ತಬೇಕಾದರೆ ನಿಧಾನವಾಗಿಯೇ ಹತ್ತಬೇಕಾಗುತ್ತದೆ. ಇಲ್ಲದಿದ್ದರೆ ಅವುಗಳ ತುತ್ತ ತುದಿಯನ್ನು ತಲುಪುವುದರೊಳಗೆ ಆಯಾಸವಾಗಿ ಉತ್ಸಾಹವನ್ನು ಕಳೆದುಕೊಂಡು ನಡುದಾರಿಯಲ್ಲೇ ಕುಳಿತುಬಿಡಬೇಕಾಗುತ್ತದೆ.

ನಾಲ್ಕನೆಯದು ಶನೈರ್ವಿದ್ಯಾ. ವಿದ್ಯೆಯನ್ನು ನಿಧಾನವಾಗಿ ಕಲಿಯಬೇಕು.
ಪಾಠ ಪ್ರವಚನ, ಸಂಗೀತ, ಶಾಸ್ತ್ರ ಮತ್ತು ಇತರ ವಿದ್ಯೆಗಳನ್ನು ವೇಗವಾಗಿ
ಓದಿ ಮುಗಿಸಿಬಿಡಲು ಹಾತೊರೆದರೆ, ಅವುಗಳ ಆಳ ಅಧ್ಯಯನ ಮಾಡಿ ಪರಿಪೂರ್ಣತೆ ಪಡೆಯದೆ
ಅಲ್ಪಮತಿಯಾಗಿ ಉಳಿದುಕೊಳ್ಳುವ ಸಾಧ್ಯತೆ ಇದೆ.

ಕೊನೆಯದಾಗಿ, ಶನೈರ್ವಿತ್ತಂ. ನಿಧಾನವಾಗಿ ಧನವಂತನಾಗಬೇಕು. ಕ್ಷಣದಲ್ಲಿ ಸಾಹುಕಾರನಾದವನಿಗೆ ಹಣದ ಗುಣದ ಬೆಲೆ ತಿಳಿಯದೆ, ತನಗೆ ಬಂದ ಎಲ್ಲ ಸೊತ್ತನ್ನು ಕೆಟ್ಟ ಚಟಕ್ಕೆ ಬಲಿಯಾಗಿ ಎಲ್ಲವನ್ನೂ ಕಳೆದುಕೊಳ್ಳಬಹುದು. 'ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದನಂತೆ' ಎನ್ನುವ ಗಾದೆಗೆ ಅಪಹಾಸ್ಯಕ್ಕೆ ಅವನು ಈಡಾಗಬಹುದು.

ನಾವು ಈ ಮೇಲಿನ ಐದು ಸುವಚನಗಳನ್ನು ಪಾಲಿಸಿದರೆ ನಮ್ಮ ಜೀವನಕ್ಕೆ ಸಹಾಯವಾಗಬಹುದು. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ಕ್ಯಾನ್ಬೆರ ಪ್ರಾಂತ್ಯದ ಪುಷ್ಪ – ರಾಯಲ್ ಬ್ಲೂ ಬೆಲ್

- ಆಸ್ಟ್ರೇಲಿಯಾದ ರಾಜಧಾನಿಯಾದ ಕ್ಯಾನ್ಬೆರದ ಪುಷ್ಪ ಲಾಂಛನವಾಗಿರುವ ರಾಯಲ್ ಬ್ಲೂ ಬೆಲ್ ಎನ್ನುವ ಈ ಪುಷ್ಪದ ಸಸ್ಯಶಾಸ್ತ್ರೀಯ ಹೆಸರು "ವಹ್ಲೆನ್ಬೆರ್ಜಿಯ ಗ್ಲೋರಿಯೋಸ"
- ಸುಮಾರು ಒಂದು ಅಡಿ ವ್ಯಾಸವುಳ್ಳ ಪೊದೆಯಾಕಾರದ ಈ ಸಸ್ಯವು, ವರ್ಷಪೂರ್ತಿ ಬೆಳೆಯುವ ಪ್ರಬೇಧದ್ದು
- ಅಲೆಯಾಕಾರದ ಅಂಚಿನ ಎಲೆಗಳನ್ನು ಹೊಂದಿರುವ ಇದರ ಎಲೆಗಳು, ಸುಮಾರು ಒಂದು ಇಂಚಿನಷ್ಟುದ್ದವಿರುತ್ತದೆ
- ಕ್ಯಾನ್ಬೆರದ ಪುಷ್ಪ ಲಾಂಛನವಾಗಿ ಮೇ ೨೬ ೧೯೮೨ ರಲ್ಲಿ ಅಂಗೀಕರಿಸಲಾಯಿತು.
- ನೇರಳೆ ಮಿಶ್ರಿತ ನೀಲಿ ಬಣ್ಣದ ಹೂವುಗಳನ್ನು ಯಥೇಚ್ಚವಾಗಿ ಅಕ್ಟೋಬರ್ ನಿಂದ ಮಾರ್ಚ್ ತಿಂಗಳ ತನಕ ನೋಡಬಹುದು
- ಪುಟ್ಟ ಪುಟ್ಟ ಹೂವಾಗಿ ಅರಳುವ ಈ ಕುಸುಮದ ಮಧ್ಯ ಭಾಗವು ತೆಳು ನೀಲಿ ಬಣ್ಣದಿಂದ ಕೂಡಿರುತ್ತದೆ
- ಕ್ಯಾಮ್ಪಾನುಲೇಸಿಯೆ ಕುಟುಂಬಕ್ಕೆ ಸೇರಿದ ಈ ಗಿಡವನ್ನು ಬೀಜ, ಕಟಿಂಗ್ ಅಥವಾ ಬೇರಿನಿಂದ ಕೂಡ ವೃದ್ಧಿಪಡಿಸಬಹುದು ▪

ರಾಯಲ್ ಬ್ಲೂ ಬೆಲ್ ಹೂವು

ಬ್ಲೂ ಬೆಲ್ ಹೂವಿರುವ ಒಂದು ಸ್ಟ್ಯಾಂಪ್

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚೆಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಮೆಟ್ಟಿಲು:(ಹಾಸ್ಯ)

ಕನಕಾಪುರ ನಾರಾಯಣ



ರಾಜ ಅಕ್ಬರ್ ತನ್ನ ಮಂತ್ರಿ ಬೀರಬಲ್ಲನ ಜೊತೆ ಒಮ್ಮೆ ವಿಹಾರಕ್ಕೆಂದು ಉದ್ಯಾನವನದಲ್ಲಿ ವಿಹರಿಸುತ್ತಿದ್ದನು. ರಾಜನು ಬೀರಬಲ್ಲನನ್ನು ಚೇಷ್ಟೆ ಮಾಡಲೆಂದು ಬೀರಬಲ್ ನೀನು ನಿನ್ನ ಹೆಂಡತಿಯಕೈಯಲ್ಲಿ ಎಷ್ಟು ಬಳೆಗಳಿವೆ ಎಂದು ನೋಡಿರುವೆಯಾ ಎಂದ. ಅದಕ್ಕೆ ಉತ್ತರವಿಲ್ಲದೆ ಬೀರಬಲ್ ಗೊತ್ತಿಲ್ಲವೆಂದು ತಲೆಯಾಡಿಸಿದ.

ಅಕ್ಬರ್ "ಅರೆ ನೀನು ದಿವಸವೂ ಊಟ ಬಡಿಸುವ ನಿನ್ನಾಕೆಯ ಕೈಬಳೆ ಎಷ್ಟಿವೆ ಎಂದೇ ನೋಡಿಲ್ಲವೇ" ಎಂದು ನಕ್ಕ.

ಸ್ವಲ್ಪ ಹೊತ್ತಿನ ಬಳಿಕ ಬೀರಬಲ್ ಅಕ್ಬರನನ್ನು ಕುರಿತು ಕೇಳಿದ "ಪ್ರಭು ನೀವು ಪ್ರತಿದಿನ ಈ ಉದ್ಯಾನವನಕ್ಕೆ ಬರುತ್ತೀರಲ್ಲವೆ?".....

"ಹೌದು".....

ಹಾಗಿದ್ದರೆ ನಿಮ್ಮ ಉದ್ಯಾನವನದಲ್ಲಿ ಒಟ್ಟು ಎಷ್ಟು ಮೆಟ್ಟಿಲುಗಳಿವೆ?" ಎಂದ. ಅಕ್ಬರ್ ತನ್ನ ತಪ್ಪನ್ನರಿತು ಸ್ನೇಹದ ನಗೆ ಚೆಲ್ಲಿದ. ▪

ಮೆಣಸಿನ ಸಾರು

ಬೇಕಾಗುವ ಸಾಮಗ್ರಿಗಳು

- 15 ಗ್ರಾಂ ಮೆಣಸಿನ ಕಾಳು, ಒಂದೊಂದು ಚಮಚ ಉದ್ದು ಹಾಗೂ ಕಡ್ಲೇ ಬೇಳೆ
- ಅರ್ಧ ಲೋಟ ಕೊಬ್ಬರಿ ತುರಿ, 1/2 ಚಮಚ ಜೀರಿಗೆ, 1 ಚಮಚ ಕೊತ್ತಂಬರಿ ಬೀಜ
- ಹಾಲು 1/2 ಲೋಟ, ಕರಿಬೇವು, ರುಚಿಗೆ ಉಪ್ಪು, ಬೆಲ್ಲ, 2 ಚಮಚ ತುಪ್ಪ
- ಒಗ್ಗರಣೆಗೆ ಸಾಸಿವೆ, ಜೀರಿಗೆ, ಇಂಗು, ನೀರು 1 ಲೀಟರ್

ಮಾಡುವ ವಿಧಾನ

- ಮೆಣಸಿನ ಕಾಳು, ಉದ್ದು, ಕಡ್ಲೇ ಬೇಳೆ, ಜೀರಿಗೆ,ಕೊತ್ತಂಬರಿ ಬೀಜ ಎಲ್ಲವನ್ನೂ ಘಮ್ಮನೆ ಹುರಿದು ಆರಿದನಂತರ ಪುಡಿಮಾಡಿ
- ಕೊಬ್ಬರಿ ತುರಿ ಜೊತೆಗೆ ಈ ಪುಡಿಯನ್ನು ಸೇರಿಸಿ ರುಬ್ಬಿಕೊಳ್ಳಿ.
- ನೀರು ಹಾಕಿ ಕುದಿಸಿ
- ಸಾಸಿವೆ, ಜೀರಿಗೆ, ಇಂಗು ಒಗ್ಗರಣೆ ಹಾಕಿ ಊಟ ಬಡಿಸುವ ಮುನ್ನ ಹಾಲು ಬೆರೆಸಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ಊಟಕ್ಕೆ ಕುಳಿತವರು ಹನ್ನೆರಡು ಜನರು, ಬಡಿಸುವವರು ಇಬ್ಬರು, ಒಬ್ಬನು ಒಬ್ಬರಿಗೆ ಬಡಿಸುವಷ್ಟರಲ್ಲಿ ಇನ್ನೊಬ್ಬನು ಹನ್ನೆರಡು ಜನಕ್ಕೂ ಬಡಿಸಿರುತ್ತಾನೆ

೨. ಒಂದು ರುಮಾಲು ನಮ್ಮಪ್ಪನೂ ಸುತ್ತಲಾರ

ಉತ್ತರಕ್ಕೆ ಪುಟ ೧೨ ನೋಡಿ

ಯೋಚ್ನೆ ...

ಐನೋರ್ ಹೇಳೋದ್ ಪುರಾಣ
ಆದ್ರೆ ಐನೋರ್ಗೆ ಕಾಸಂದ್ರೆ ಪ್ರಾಣ

ಚಾಕರಿನ್ನ ಮಾಡಸ್ಕೊಂಡು
ಚಾರ್ ಕಾಸು ಕೊಡ್ತಾರೆ
ಚಾ ಕುಡ್ಯಕ್ ಆಗ್ತದೆ ಅಷ್ಟೇ!

ಆಡ್ ಆಡ್ತಾ ಅರ್ಮನೆ
ಕಟ್ಕೊಂಡೇ ಬಿಡ್ತಾರೆ
ಬಡವ್ಂಗೆ ಬಾಳಂದ್ರೆ ಇಷ್ಟೇ!

ಜಗ್ದಲ್ಲಿ ಬಗ್ವಂತ
ಎಲ್ಲೆಲ್ಲು ಇರ್ತಾನೆ
ಅವ್ನಗ್ಯಾಕೆ ಬೇಕೊಂದು ಕ್ವಾಣೆ!

ಆ ಕ್ವಾಣೆನ ಕಾಯೋಕ್ಕೆ
ಈ ವಯ್ಯ ಇರ್ತಾನೆ
ಇದ್ಕೇನೆಂತಅರ್ತ ನಾ ಕಾಣೆ!

ಸುಮ್ನೆ ನಾ ಉಣ್ಕೊಂಡು
ಏನೇನೋ ಅನ್ಕೊಂಡು
ಮಕ್ಕೊಂತೀನ್ ನಾನೊಬ್ಬ ಕೆಪ್ಪಾ!

ಮದ್ವೆನೊ ಮುಂಜಿನೊ
ಕೂಳಂತು ಗ್ಯಾರಂಟಿ
ಆಕವ್ರೆ ಕಾರ್ನರ್ನಲ್ ಚಪ್ಪ!

-ಮಾಲು, ಅಡಿಲೈಡ್

ಜಾಣ ಕರ್ನಾಟಕ

ಕನ್ನಡದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳಿಸಿರುವ ತಂದೆ-ಮಕ್ಕಳ ಎರಡು ಜೋಡಿಯನ್ನು ಹೆಸರಿಸಿ. ಇವರುಗಳ ಯಾವ ಕೃತಿಗಳಿಗೆ ಆ ಪ್ರಶಸ್ತಿ ದೊರೆತಿವೆ?

ಸರಿ ಉತ್ತರಕ್ಕೆ ಪುಟ ೨೧ ನೋಡಿ

ಒಗಟು – ಉತ್ತರ

೧. ಗಡಿಯಾರ ೨. ದಾರಿ

ಹಾಸ್ಯ ಚಿಲುಮೆ

ಮಗ: ಅಪ್ಪ, ನಾನು ಗಾಂಧೀಜಿ ಥರ ಆಗಬೇಕು

ಅಪ್ಪ: ಆಗು. ಬೇಡ ಅಂದವರ್ಯಾರು

ಮಗ: ಹಾಗಿದ್ರೆ ಅವರು ಹನ್ನೆರಡನೇ ವಯಸ್ಸಿಗೇ ಮದುವೆ ಆದರು ..... ನಾನೂ ಆಗುವೆ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಮೀಸೆಹೊತ್ತ ವೀರರು ...

ರಚನೆ: ಬದರಿ ತ್ಯಾಮಗೊಂಡ್ಲು

ಮೀಸೆಹೊತ್ತ ವೀರರೆಲ್ಲ
ದ್ವಾರದ್ವಾರದಲ್ಲಿ ಬಂದು
ತಿರುವುತಿರುವಿನಲ್ಲು ಕುಳಿತು ಧಾಳಿಯಿಟ್ಟರು
ನಯನವೆಲ್ಲಿ ನೋಡಿದರೂ
ಬುಳುಬುಳುಕ್ಕನೆಂದು ಹರಿದು
ಸೆರೆಯಹಿಡಿಯಹೋದಲೆಲ್ಲ ಜಾರಿಕೊಂಡರು

ತಾಳಲಾರದಿವರ ತೊಡರ
ವಿಷದರೇಖೆಯನ್ನು ಎಳೆದು
ಬಾರೊ ಬಾರೊ ದಾಟಿಯೆಂದು ಕೂಗಿಕೊಂಡೆನು
ಸುರರಪುತ್ರರಂತೆಯವರು
ವಿಷದಲೇಪವಾದರೂವೆ
ಹಹಹಹಹವೆನುತ ದಾಟಿಬಿಟ್ಟರು

ಧೂಮದಸ್ತ್ರ ಹೂಡಿಯಿನ್ನು
ನೇಮದಿಂದ ಯಮನ ಸ್ತುತಿಸಿ
ಬಿಮ್ಮನೆದ್ದು ಧೂಮಬಾಣವನ್ನೊಗೆದೆನಾ
ಒಮ್ಮೆಯವರು ಚದುರಿ ಮತ್ತೆ
ಸುಮ್ಮನಿರದೆ ಬಂದುನಿಂತು
ಸಾಮದಾನಬೇಧದಂಡ ನಡೆಯದೆಂದರು

ತರಿದುತರಿದು ಬಿಡುವೆ ನಿಮ್ಮ
ತಲೆಗಳನ್ನು ಛಿದ್ರಮಾಡಿ
ಹೊಸಕಿಹಾಕಿ ದೇಹವನ್ನು ಹೊರಗೆಸೆವೆನೂ
ಹೇಳಿದಂತೆ ಹೊಸಕಹೊರಟೆ
ರೋಷದಿಂದ ಬಡಿದು ಕೊಂದೆ
ಸಂಹರಿಸಿರೆ ಹತ್ತುಮಂದಿ ಸುಸ್ತು ಹೊಡೆದೆನು

ಅಮರಪುತ್ರರನ್ನು ನೋಡಿ
ಕಮರಿಹೋಯ್ತು ನನ್ನ ಶಕ್ತಿ
ಸಮರು ನಿಮಗೆ ಇಲ್ಲವೆಂದು ಶರಣಾದೆನೂ
ಹೆಮ್ಮೆಯಿಂದ ತಮ್ಮ ಸೈನ್ಯ
ನಮ್ಮಮನೆಯೊಳಕ್ಕೆ ಹರಡಿ
ಹಮ್ಮಿನಿಂದ ಬಿಡದೆಯೆಲ್ಲ ಮುತ್ತಿಬಿಟ್ಟರು

ಎಂಥಗತಿಯು ಬಂತೆಂದು
ಕುಂತು ದೇವ ಧ್ಯಾನ ಮಾಡೆ
ನಿಂತುಕೊಂಡು ನನ್ನ ಮುಂದೆ ಸಲಹೆ ಮಾಡಿದ
ಚಿಂತೆಬಿಟ್ಟು ಕೇಳೊ ಮಗನೆ
ಹಂತಕಸ್ತ್ರವಿರದವಕ್ಕೆ
ತಂತೆಂದರೆ ಶುಚಿಯಸ್ತ್ರವ ಓಡಿ ಹೋಗ್ಚರು

ಅವನು ಹೇಳಿದಂತೆ ಮಾಡಿ
ಎಲ್ಲಜಾಗ ಶುಚಿಯ ಮಾಡೆ
ನಿಲ್ಲದಂತರಾಗಿಯವರು ಕಾಣದಾದರು
ಬಲ್ಲಜನರು ಹೇಳಿದಂತೆ
ತೈಲಪದರಿ ಶಾಸ್ತ್ರವಿದುವೆ
ಬಲ್ಲ ಭಕ್ತಿಯಿಂದ ಶುಚಿಯ ಕಾಪಾಡಿರೈ

ಇರುವ ಮನೆಯವಂದಚೆಂದ
ಇರಲಲ್ಲಿಯು ಶುಚಿಯಬಂಧ
ಬರದಾವುದೆ ತೈಲಪಲ್ಲಿ ಬೇಡ ಸಂಶಯ
ಬರುವುದೆಲ್ಲ ಭಾಗ್ಯಗಳು
ತರುವುದೆಲ್ಲ ಸೊಬಗುಗಳನು
ಹರಿಯಾಣೆಗು ನಿಜವಿಹುದಿದು ಶುಭ ಮಂಗಳ ▪



ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಸಮುದ್ರದಿಂದೊದಗುವ ಬಲು ಮುಖ್ಯ ಖನಿಜಕ್ಕೂ.
ಈ ಜನಪ್ರಿಯ ತಿಂಡಿಗೂ ಸಂಬಂಧವುಂಟೇನು?

೨. ಜೊತೆಯಲ್ಲೇ ನೆಲೆಸದಿದ್ದರೂ 'ಸಾಕಪ್ಪಾ ಇವರದು'
ಎನಿಸುವಂತಹ 'ಒಡನಾಟ'.

೩. ಲಕ್ಷ್ಮೀನರಸಿಂಹನು ಪ್ರಸನ್ನನಾಗಿರದೇ
ಇರುವಾಗಿನ ಮತ್ತೊಂದು ರೂಪ!

೪. ಇರುವುದೆಲ್ಲವ ತ್ಯಜಿಸಿದ ದೊರೆಗಳೇನು.
ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲೊಬ್ಬರಾದ ಇವರು?

೫. ಬೇರೆಯವರನ್ನು ಅಕ್ರಮಿಸಿಕೊಳ್ಳಲಿಲ್ಲ ಅವನು.
ತನ್ನ ಶೌರ್ಯ ತೋರಿಸಿದನಷ್ಟೆ.

ಉತ್ತರ: ನಿಮ್ಮ ಕೆಲಸ ಸಾಧಿಸಲು ಇದೂ ಒಂದು ಮಾರ್ಗ.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಏಪ್ರಿಲ್ ೨೫ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಮಾರ್ಚ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಶಾರದ ಅರವಿಂದ್, ಬೆಂಗಳೂರು
- ಹರಿಣಿ ರಾವ್, ನವದೆಹಲಿ
- ಶುಭಶ್ರೀ, ಸಿಡ್ನಿ
- ಶ್ರೀನಾಥ್ ಎಂ

ಮಾರ್ಚ್ ತಿಂಗಳ ಪದಪುಂಜದ ಉತ್ತರ

೧.ಇದಕ್ಕಾಗಿಯೇ ಅಲ್ಲವೆ ಬಹಳಷ್ಟು ವೇಷ.

ಉ	ದ	ರ

೨. ಮಂಗಳಾರತಿಯ ಸಂಗಾತಿಯಾದದ್ದು ಈ ನಿನಾದ.

ಘಂ	ಟಾ	ನಾ	ದ

೩.ಜಾತ್ರಾ ಮಹೋತ್ಸವದಲ್ಲಿ ಎಲ್ಲರ ನಂಟಾಗಿದ್ದು ಈ ಕಾಯಿಲೆ.

ಅಂ	ಟು	ರೋ	ಗ

೪. ಶ್ರೀ ರಂಗನಾಥನಿಗೆ ನಿಮಿಷಗಳಷ್ಟೇ ದೂರದಲ್ಲಿ
ಕಾವೇರಿಯ ಸನಿಹದಲ್ಲಿರುವ ತಾಯಿ.

ನಿ	ಮಿ	ಷಾಂ	ಬ

೫. ಸಾಲ ತಂದು ಕೈಗೆ ಹಾಕಬೇಕೆ ಈ ಆಭರಣ.

ಕ	ಡ	ಗ

೬. ಆಸೆಗಳೆಲ್ಲಾ ಇದರೊಳಗಿನ ಗಂಟಾಗಿ ಹೋಯಿತೆ?

ಕ	ನ್ನ	ಡಿ

ಉತ್ತರ: ಗಂಟಿನಲ್ಲಿ ಅಡಗಿದೆಯೇ ನಮ್ಮ ತಾಯ್ನುಡಿಯ
ಪದ ಮತ್ತು ಅರ್ಥಗಳ ಕೋಶ?

ಕ	ನ್ನ	ಡ	ದ	ನಿ	ಘಂ	ಟು

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ಕುಂದಣಮಯವಾದ ರಂಗೋಲಿ

ರಚನೆ: ಶ್ರೀಮತಿ ರಶ್ಮಿ ಸೋಮಶೇಖರ್, ಬೆಂಗಳೂರು

ಅಸಾದುಲ್ಲ ಬೇಗ್ ಅವರ ಶಾಯರಿಗಳು

ಎಲ್ಲ ತೊರೆದು...

ಮನೆ-ಮಠ
ಮಡದಿ ಮಕ್ಕಳು
ಎಲ್ಲ ತೊರೆದು
ಹೋಗುವ ದಿನ
ನೆನೆದು
ಮನ ಅಳುಕುತ್ತಿದೆ !

ಬೆನ್ನ ಹಿಂದೆ ಬರುವುದು
ಕರ್ಮವಷ್ಟೆ !
ಚರ್ಮವೂ ಬಾರದು
ಅವನಿರುವ ಕಡೆಗೆ !

ನಿನ್ನ ವಿನಃ

'ನನ್ನ ವಿನಃ
ನನ್ನವರು,
ಬದುಕಲಾರರು'
ಅಂದುಕೊಳ್ಳೂವುದು
ಎಂದು ಆತ್ಮೀಯ ಕಲ್ಪನೆ !

ಹಲವು ಬಾರಿ
ಬದುಕಿಗನಿವಾರ್ಯ
ಇಂಥ ತಪ್ಪು ಕಲ್ಪನೆ !

ಗುಡ್ಡದ ಭೂತ !!!

ಸ್ಮಿತಾ ಮೇಲ್ಕೋಟೆ

ಬಹಳ ಹಿಂದೆ ದೂರದರ್ಶನದಲ್ಲಿ ಪ್ರಸಾರವಾಗುತಿದ್ದ "ಗುಡ್ಡದ ಭೂತ " ಧಾರಾವಾಹಿ ಕೊಂಚ ಭಯ ಪಡಿಸಿದರೂ, ಕೊನೆಯ ಕಂತಿನಲ್ಲಿ ದೆವ್ವ, ಭೂತ ಪ್ರೇತ ಪಿಶಾಚಿ ಎಲ್ಲಾ ಭ್ರಮೆ ಎಂದು ಸಾಬೀತು ಪಡಿಸಿದರು. ಆ ಕ್ಷಣಕ್ಕೆ ಸಮಾಧಾನ ಆಗಿದ್ದರೂ ಕೂಡ ಮನದ ಯಾವುದೋ ಚಿಕ್ಕ ಮೂಲೆಯಲ್ಲಿ ಅವ್ಯಕ್ತ ಭಯ ಶಾಶ್ವತವಾಗಿ ಮನೆ ಮಾಡಿತ್ತು!!

ಇದಾದ ಎಷ್ಟೋ ವರ್ಷಗಳ ನಂತರ ಜೀವನದ ಕಾಲಚಕ್ರ ಉರುಳಿ, ಮನೆ ಗಂಡ ಮಕ್ಕಳು ಮತ್ತು ಕಚೇರಿಯ ಕೆಲಸದ ನಡುವೆ ಬ್ಯುಸಿ ಆಗಿ, ಭೂತ ಮತ್ತು ಭಯ ಎಲ್ಲಾ ಹಾರಿ ಹೋಗಿತ್ತು. ದಿನ ನಿತ್ಯದ ಸವಾಲುಗಳು, ಅದನ್ನು ಎದುರಿಸಲು ಹೆಣಗುವ ಜೀವನ, ಸವಾಲುಗಳಿಗೆ ಉತ್ತರ ಹುಡುಕುತ್ತಾ ನಮ್ಮ ಸಮಯ ಜಾರಿ ಹೋಗುತ್ತಿರಬೇಕಾದರೆ, ಒಂದು ರಾತ್ರಿ ನಮ್ಮನೆಯಲ್ಲಿ ಹಟಾತ್ತನೆ ಗುಡ್ಡದ ಭೂತ ಎದುರಾಗಬೇಕೆ ?

ಗುಡ್ಡದ ಭೂತ ನೋಡಿದ ನಾನು ಮತ್ತು ಯಜಮಾನರು ಇಬ್ಬರೂ ದೊಡ್ಡ ಆಘಾತಕ್ಕೆ ಒಳಗಾದೆವು. ಮೇಲೆ ಒಬ್ಬರಿಗೊಬ್ಬರೂ ತೋರಿಸಿಕೊಳ್ಳದೆ, ಸಮಾಧಾನವಾಗಿ ಇದಕ್ಕೊಂದು ಗತಿ ಕಾಣಿಸುವುದು ಹೇಗೆ ಎಂದು ತಲೆ ಕೆಡೆಸಿಕೊಂಡೆವು. ಸುಮಾರು ರಾತ್ರಿ ನಿದ್ದೆಯೇ ಹತ್ತಲಿಲ್ಲ. ಭೂತ ಪರಿಹಾರದ ಯೋಚನೆಯೇ ಕನಸಿನ ಮೂಲೆ ಮೂಲೆಯಲ್ಲಿ !!

ಎಂದಿನಂತೆ ಬೆಳಗಾಯಿತು, ಮಕ್ಕಳೂ ಕೂಡ ಭೂತ ದರ್ಶನ ಮಾಡಿದರು. ಆದರೆ ಅಷ್ಟೊಂದು ದೊಡ್ಡ ಭೂತದ ಪರಿಣಾಮ ಮಕ್ಕಳ ಮೇಲೇನೂ ಬೀರಿದಂತೆ ಕಾಣಲಿಲ್ಲ. ತಮ್ಮ ದೈನಂದಿನ ಚಟುವಟಿಕೆ ನಿರಾತಂಕವಾಗಿ ನಡೆದು ಶಾಲೆಯ ದಾರಿ ಹಿಡಿದರು. ನನಗೋ ಆಶ್ಚರ್ಯ ಭೂತ ಬೆಳಿಗ್ಗೆ ಕೂಡ ಸೂರ್ಯನ ಬೆಳಕಿನಲ್ಲಿ ಹೊಳೆಯುತ್ತಿದೆ. ರಾತ್ರಿ ಮಾತ್ರವೇ ಭೂತದ ಶಕ್ತಿ ಅಂತ ಓದಿದ್ದ ನಂಗೆ , ಈ ಮಾಡ್ರನ್ ಭೂತ ಬೆಳಿಗ್ಗೆಯೂ ರಾಜಾ ರೋಷವಾಗಿ ಎದುರಿದ್ದು ಕಂಡು ನನಗೆ ಎಲ್ಲಿಲ್ಲದ ಕೋಪ! ವಿಧಿಯಿಲ್ಲದೇ ಭೂತವನ್ನು ಮನೆಯಲ್ಲೇ ಬಿಟ್ಟು ಕಚೇರಿಗೆ ನಡೆದೆವು. ಕಡತಗಳ ಮಧ್ಯೆ ಕಳೆದು ಹೋಗಿದ್ದರೂ, ಮನಸ್ಸು ಭೂತ ಓಡಿಸುವ ಚಿಂತೆ ಬೆಂಬಿಡದ ಭೇತಾಳವಾಗಿತ್ತು !

ಭೂತ ಓಡಿಸೋಕ್ಕೆ ಮನೆ ದೇವರಿಗೊಂದು ಪೂಜೆ ಮಾಡಿದರೆ ಹೇಗೆ ಎಂಬ ಯೋಚನೆ ಬಂತಾದರೂ, ಪ್ರಾಕ್ಟಿಕಲ್ ಆಗಿ ಹೇಗೆ ಭೂತವನ್ನು ಓಡಿಸಬೇಕು ಅಂತ ಆಲೋಚನೆ ಮಾಡಿ, ಸಂಜೆ ಗಂಡನಿಗೆ ಬೇಗ ಬರಲೆಂದು ಭಿನ್ನವಿಸಿ, ಬೇರೆಲ್ಲಾ ಕೆಲಸಗಳನ್ನು ಬದಿಗಿಟ್ಟು ಗುಡ್ಡದ ಭೂತವನ್ನು ಮನೆಯಿಂದ ಹೊಡದೋಡಿಸಿದೆವು. ನಂತರ ಇಬ್ಬರ ಮುಖದಲ್ಲೂ ಏನೋ ನೆಮ್ಮದಿ ಸಂತೋಷ !

ಮುಂದೆರಡು ದಿನಗಳಲ್ಲಿ ಬೆಳಿಗೆದ್ದು ನೋಡ್ತೀವಿ, ಗುಡ್ಡದ ಭೂತ ತನ್ನ ಮರಿಯನ್ನು ಕರೆದುಕೊಂಡು ಮತ್ತೆ ನಮ್ಮನೆ ಪ್ರವೇಶ ಮಾಡಿದೆ . ಹೋದೆಯಾ ಪಿಶಾಚಿ ಅಂದ್ರೆ ಬಂದೆ ಗವಾಕ್ಷಿಲಿ ಗಾದೆ ಸಂಪೂರ್ಣ ನಿಜವಾಯಿತು ! ನಾನು ನನ್ನ ಯಜಮಾನರು ಭೂತ ದರ್ಶನವಾದ ಮೇಲೆ ಪ್ರಜ್ಞೆ ತಪ್ಪಿ ಬೀಳುವುದೊಂದೇ ಬಾಕಿ !!

ಪ್ರಿಯ ಓದುಗರೇ ಏಪ್ರಿಲ್ ತಿಂಗಳು ಎಂದು ನಿಮ್ಮನ್ನು ಫೂಲ್ ಮಾಡಕ್ಕೆ ಕಾಗಕ್ಕನ ಕಥೆ, ಗೂಬಕ್ಕನ ಕಥೆ ಬರೀತಾ ಇದ್ದೀನಿ ಅಂತ ಅಂದುಕೊಳ್ಳಬೇಡಿ. ನಮ್ಮನೆ ಭೂತದ ಸಂಪೂರ್ಣ ಪರಿಚಯ ಮಾಡಿಕೊಡ್ತೀನಿ ನಿಮಗೀಗ.

ಹಬ್ಬ, ಹರಿದಿನ, ಕ್ರಿಸ್ಮಸ್, ಹೊಸವರ್ಷ ಎಂದು ಬಟ್ಟೆ ಮೇಲೆ ಬಟ್ಟೆ ಖರೀದಿಸಿ, ಎಲ್ಲವನ್ನೂ ಉಪಯೋಗಿಸಕ್ಕೂ ಪ್ರಾರಂಭಿಸಿ, ಒಗೆದು , ಹರವಿ , ಗರಿ ಗರಿಯಾದ ಬಟ್ಟೆಗಳು ಮನೆಯೊಳಗೇ ಕಾಲಿಟ್ಟ ಮೇಲೆ, ನಮಗೆ ಸಮಯದ ಅಭಾವ, ಮಡಚಿ ಒಳಗಿಡದೆ , ಹಾಗೆ ಗುಡ್ಡೆ ಹಾಕಿ ಹಾಕಿ, ಅಲ್ಲಿಂದಲೇ ಬೇಕಾದ ಬಟ್ಟೆ ತಗೊಂಡು, ಬೇಡದ್ದು ಬಿಸುಟು , ಈ ಸಮಸ್ಯೆ ಒಂದು ದಿನ ಗುಡ್ಡದ ಭೂತವಾಗಿ ಕಾಡುತ್ತೆ ಎಂದು ಗೊತ್ತಿರಲಿಲ್ಲ.

ಮತ್ತೆ ಮತ್ತೆ ಪ್ರತ್ಯಕ್ಷ ವಾಗುವ ಗುಡ್ಡದ ಭೂತ ನೋಡಿ ಯಜಮಾನರು, ಮೌಂಟ್ ಎವರೆಸ್ಟ್ ಬೆಟ್ಟ ಬೇಕಾದರೂ ಹತ್ತು ಅನ್ನು ಮಾಡ್ತೀನಿ , ಆದರೆ ನನ್ನ ಕೈಲಾಗಲಮ್ಮ ಈ ಬಟ್ಟೆ ಬೆಟ್ಟ ಕರಗಿಸಕ್ಕೆ!!

ಹಾಗಾದ್ರೆ ಗುಡ್ಡದ ಭೂತಕ್ಕೇ ಭೂತಾರಾಧನೆಯೇ ಸರಿ ಅಂತೀರಾ ಎಂದು ಕಣ್ಣು ಮಿಟಕಿಸಿದೆ !!! ▪

ಸ್ವಲಗ್ನಾ ಸಾವಧಾನ

ಲೇಖಕರು:
ನಾಗಶ್ರೀ ಕುಮಾರ್

"ರ್ರೀ ಸ್ವಾಮಿಗಳೆ, ಎಲ್ರೀ ಇದೆ ನಿಮ್ ಗ್ಯಾನ. ಸ್ವಲ್ಪ ನಿಗಾ ಕೊಟ್ಟು ಮಂತ್ರ ಹೇಳಿ. ನಮಗೇನೂ ಗೊತ್ತಾಗಲ್ಲಾ ಅಂತ ಯಾಮಾರಿಸ ಬೇಡಿ. ನಾವೂ ಸಾಕಷ್ಟು ಧಾರೆ ಮೂರ್ತಗೋಳ್ನ ನೋಡಿದ್ದೀವಿ. ಯಾವ್ದುಕ್ಕೆ ಯಾವ್ದೋ ಮಂತ್ರ ಹೇಳ್ತಿದ್ದೀರಲ್ಲ". ಧಾರೆ ಮಂಟಪದ ಬಳಿಯಿದ್ದ ಹಿರಿಯರು ಕೂಗಾಡುತ್ತಿದ್ದರು.

ತೀಡಿ ತಿದ್ದಿದ ದಂತದ ಬೊಂಬೆಯತಿದ್ದ, ಯಾವುದೇ ರೂಪದರ್ಶಿಗಳು ಅಸೂಯೆ ಪಡುವಂತಿದ್ದ ವಧುವಿನ ಪಕ್ಕದಲ್ಲಿ, ಹೊಂದಾಣಿಕೆಯೇ ಇಲ್ಲದ ಕಪ್ಪು ಮೈನ ಠೊಣಪ ವರನನ್ನು ನೋಡುತ್ತ, "ಏನು ದುರಾದೃಷ್ಟಾನಪ್ಪ ಇದು, ಇಂತಹ ಸುಂದರಿಗೆ ಹೋಗಿ ಈ ಗಂಡೇ? ನಾನಾದ್ರೂ ಆ ಜಾಗದಲ್ಲಿ ಕುಳಿತಿರಬಾರದಿತ್ತೆ?" ಎಂದು ಆ ಗಂಡಿನ ಜಾಗದಲ್ಲಿ ತನ್ನನ್ನು ಕಲ್ಪಿಸಿಕೊಳ್ಳುತ್ತಾ ಭ್ರಮಾಲೋಕಕ್ಕೆ ತೆರಳಿದ್ದ ಸುಬ್ಬಾ ಜೋಯಿಸ್, ಆ ಹಿರಿಯರ ಕೂಗಾಟಕ್ಕೆ ವಾಸ್ತವ ಸ್ಥಿತಿಗೆ ಮರಳಿದ.

ಇದುವರೆವಿಗೂ ಅದೆಷ್ಟು ಹೆಣ್ಣುಗಳಿಗೆ ಮಾಂಗಲ್ಯ ಕಟ್ಟಿದ್ದನೋ, ಕ್ಷಮಿಸಿ ಕಟ್ಟಿಸಿದ್ದನೋ ನಮ್ಮ ಸುಬ್ಬ ಅಲ್ಲಲ್ಲ ಸುಬ್ಬಾ ಜೋಯಿಸ್, ಲೆಕ್ಕವೇ ಇಲ್ಲ. ಆದರೆ ಅವನೇ ತಾಳಿ ಕಟ್ಟುವ ಸಮಯ ಇನ್ನೂ ಕೂಡಿ ಬಂದಿರಲೇ ಇಲ್ಲ. ಲಗ್ನಗಳ ಕಟ್ಟಿಸಿ, ಮುಹೂರ್ತವಿಟ್ಟು, ಮದುವೆಗಳ ಮಾಡಿಸುವುದರಲ್ಲಿ ಹಿರಿಯರನ್ನೂ ಮೀರಿಸಿ ಪ್ರಸಿದ್ಧನಾಗಿದ್ದ ಸುಬ್ಬಾ ಜೋಯಿಸ್ ಗೆ ವಯಸ್ಸು ಇನ್ನೂ ಇಪ್ಪತ್ತೆಂಟು. ಒಬ್ಬನೇ ಮಗ ಚೆನ್ನಾಗಿ ಓದಿ ಯಾವ್ದಾದ್ರೂ ಸರ್ಕಾರಿ ಕೆಲಸ ಮಾಡುತ್ತಾನೆ ಎಂದು ಆಸೆ ಪಟ್ಟಿದ್ದರು ಅಪ್ಪ ಅಮ್ಮ.

ಚಿತ್ರ ರಚನೆ: ಕು. ಮಾನಸ ಗಣೇಶ್

ಆದರೆ ಈಗಿನ ದಿನಗಳಲ್ಲಿ ಅದಕ್ಕಿಂತಲೂ ತಮ್ಮ ಕುಲಕಸುಬಾದ ಪೌರೋಹಿತ್ಯವೇ ಲಾಭದಾಯಕವೆಂದು ಕಂಡುಕೊಂಡಿದ್ದ ಸುಬ್ಬ, ಅದನ್ನು ನಿಜವಾಗಿಸಿಯೂ ಇದ್ದ. ತನ್ನ ಸಹಪಾಠಿಗಳು ಕರುಬುವಂತೆ ಸಂಪಾದಿಸುತ್ತ, ಯಾರ ಹಂಗೂ ಇಲ್ಲದೆ ಸುಖವಾದ ಜೀವನ ನಡೆಸಿದ್ದ. ಅವನಿಗೆ ವಯಸ್ಸಾದಂತೆ ತಂದೆತಾಯಿಗಳು ಅವನ ಮದುವೆಯ ಪ್ರಯತ್ನ ಆರಂಭಿಸಿದ್ದರು. ಆದರೆ ಅದು ಅಷ್ಟು ಸುಲಭವಾಗಿ ನಡೆಯುವಂತೆ ತೋರಲಿಲ್ಲ. ಅಲ್ಲಿ ದೊಡ್ಡದೇ ಆದ ಸಮಸ್ಯೆಯೊಂದಿತ್ತು... ಅದೇ ಸುಬ್ಬನ ಅತಿಅಪರೂಪವಾದ ರೂಪ.

ವಿದ್ಯಾವಂತ, ಬುದ್ಧಿವಂತನೂ ಅಲ್ದೆ ಅತಿ ರೂಪವಂತನೂ ಆಗಿದ್ದ ಸುಬ್ಬ. ಯಾವುದೇ ಸಿನೆಮಾ ನಟರ ಮೀರಿಸುವ ರೂಪ ಅವನದು. ಹಾಗಾಗಿ ತಾನು ವರಿಸುವ ಹುಡುಗಿ ವಿಶ್ವ ಸುಂದರಿಯಂತಿರಬೇಕೆಂಬ ಹೆಬ್ಬಯಕೆ ಅವನಲ್ಲಿ ಮನೆ ಮಾಡಿತ್ತು.

ಬೇರೆಲ್ಲರಿಗು, ಜಾತಕ, ರಾಶಿ, ಗಣಗಳು, ಇತ್ಯಾದಿ ಕೂಡಿದರೆ ಸಾಕೆನ್ನುತ್ತಿದ್ದ ಸುಬ್ಬ, ತನ್ನ ವಿಷಯದಲ್ಲಿ ಇವುಗಳಿಗೆ ಮಿಗಿಲಾಗಿ ಹುಡುಗಿ ರೂಪವಂತೆಯಾಗಿರಬೇಕೆಂಬ ಶರತ್ತು ಹಾಕುತ್ತಿದ್ದ. ಅವನು ಒಪ್ಪುವ ಹುಡುಗಿಯಂತೂ ಇನ್ನೂ ಅವನಿಗಾಗಿ ಬಂದಿರಲಿಲ್ಲ. ಎಷ್ಟೋಸಲ ಅವನ ಎಣಿಕೆಗಿಂತಲೂ ಮಿಗಿಲಾದ ಸುಂದರಿಯರನ್ನು ಅವನು ನೋಡುತ್ತಿದ್ದ, ಆದರೆ ಅವರು ಅವನೇ ಮಾಡಿಸುತ್ತಿದ್ದ ಮದುವೆಗಳಲ್ಲಿ ಬೇರೆಯವರ ಪಕ್ಕ ವಧುವಾಗಿ ಕುಳಿತಿರುತ್ತಿದ್ದರು.

ಮುಂದಿನ ಪುಟ ನೋಡಿ ...

ಇಂದು ಆದದ್ದೂ ಹಾಗೆಯೇ, ಸುಬ್ಬಾ ಜೋಯಿಸರಿಗೆ ಚೆಲುವಾದ ಹೆಣ್ಣಿನ ಪಕ್ಕ ಕುಳಿತಿದ್ದ ಸಾಮ್ಯವಿಲ್ಲದ ವರನನ್ನು ನೋಡಿ ಮನಸ್ಸು ಕೆಟ್ಟು ಹೋಗಿತ್ತು. ಒಮ್ಮೊಮ್ಮೆ ಸೊಗಸಾದ ಹುಡುಗನಿಗೆ ಕಪ್ಪು, ದಪ್ಪ, ಅತಿಕುಳ್ಳು, ಉಬ್ಬುಹಲ್ಲು, ಹೀಗೆ ಚೆಲುವೆಯಲ್ಲದ ಹುಡುಗಿ ಸಿಕ್ಕರೆ, ಸಧ್ಯ ತಾನು ಆ ವರನ ಸ್ಥಾನದಲ್ಲಿ ಇಲ್ಲವಲ್ಲಾ ಎಂದು ಸಮಾಧಾನ ಪಡುತ್ತಿದ್ದ.

ಅದೇಕೋ ಎಲ್ಲಾ ವಿಷಯದಲ್ಲೂ ಬುದ್ಧಿವಂತನಾದ ಸುಬ್ಬ, ಇದೊಂದು ವಿಷಯದಲ್ಲಿ ದಡ್ಡನೇ ಆಗಿದ್ದ. ಸುಖ ಸಂಸಾರಕ್ಕೆ ರೂಪಕ್ಕಿಂತ ಗುಣ ಮುಖ್ಯ ಎಂದು ಅರಿಯದಾಗಿದ್ದ. ಅವನ ತಂದೆ ತಾಯಿಗಳಷ್ಟೇ ಅಲ್ಲ, ಯಾರೇ ಹೇಳಿದರೂ ಕೇಳದೆ, ನೂರಾರು ಹೆಣ್ಣುಗಳ ನಿರಾಕರಿಸಿದ್ದ.

****

ಅಂದು ಸಂಜೆ ಹಳ್ಳಿಯಲ್ಲೊಂದು ವರಪೂಜೆ, ಮಾರನೆಯ ದಿನ ಮದುವೆ, ಅದು ಸುಬ್ಬ ಹುಟ್ಟಿಬೆಳೆದ ಹಳ್ಳಿಯೇ. ಈಗ ಅವರ ಕುಟುಂಬ ಅಲ್ಲಿಲ್ಲದಿದ್ದರೂ ಅಲ್ಲಿನ ಎಲ್ಲಾ ಸಮಾರಂಭಗಳಿಗೂ ಸುಬ್ಬ ಅಥವಾ ಅವರಪ್ಪನೇ ಪುರೋಹಿತರಾಗಿ ಹೋಗುತ್ತಿದ್ದುದು.

ಇಂದು ಸುಬ್ಬನೇ ಹೊರಟಿದ್ದ. ತನ್ನೂರೇ ಅಲ್ಲವೇ, ಟ್ರಿಮ್ ಆಗಿ ಡ್ರೆಸ್ಸ್ ಮಾಡ್ಕೊಂಡು. ಅಲ್ಲಿ ಹೋದ ಮೇಲೆ ತನ್ನ ಯೂನಿಫಾರ್ಮ್ ಹಾಕಿಕೊಂಡರಾಯಿತು. ಹೇಗೂ ಎಲ್ಲರೂ ತನಗೆ ಪರಿಚಯವಿರುವವರೇ. ಆದರೆ ತನ್ನನ್ನು ಕರೆಸಿದ್ದ ವಧುವಿನ ಮನೆಯವರು ತನ್ನ ತಂದೆಯ ಹಳೆಯ ಸ್ನೇಹಿತರಂತೆ. ಬಹಳ ಒಳ್ಳೆಯ ಜನ, ಕೆಲಸದ ನಿಮಿತ್ತ ಬಹಳ ಹಿಂದೆಯೇ ಊರು ಬಿಟ್ಟು ಹೋಗಿ ಈಗ ಮತ್ತೆ ಬಂದಿದ್ದಾರಂತೆ.

ಹಳ್ಳಿ ಸಮೀಪಿಸಿದಂತೆ ಊರೆಲ್ಲಾ ಮದುವೆಯ ಕಳೆಯಿಂದ ಶೋಭಿಸುತ್ತಿದ್ದುದು ಕಂಡು ಬಂತು. ಹಳ್ಳಿಗಳೆಂದರೆ ಹಾಗೇ, ಒಂದು ಮನೆಯ ಮದುವೆಯೆಂದರೆ, ಊರ ಜನರೆಲ್ಲಾ ಸಂಭ್ರಮ ಪಡುತ್ತಾ, ತಮ್ಮದೇ ಮನೆಯ ಕಾರ್ಯಕ್ರಮವೆಂದೇ ಭಾಗವಹಿಸುತ್ತಾರೆ. ಸುಬ್ಬ ಕೂಡ ಅತ್ಯುತ್ಸಾಹದಿಂದ ಮದುವೆ ಮನೆಗೆ ಬಂದ. ವರಪೂಜೆಯ ವೇಳೆಗೆ ತನ್ನ ಯೂನಿಫಾರ್ಮ್ ಆದ ರೇಷಿಮೆ ಪಂಚೆ ತೊಟ್ಟು, ಭರ್ಜರಿಯಾದ ಮೇಲು ಹೊದಿಕೆ ಹೊದ್ದು ಸಿದ್ಧನಾಗಿದ್ದ. ವಧುವಿನ ತಂದೆ ಸುಬ್ಬನಿಗೆ, ತನ್ನ ಪತ್ನಿ ಹಾಗೂ ಕುಟುಂಬದ ಪರಿಚಯ ಮಾಡಿಸಿದರು. ಯಥಾಪ್ರಕಾರ ವಧುವನ್ನು ನೋಡಿದ ಕೂಡಲೇ ವರನ ಸ್ಥಾನದಲ್ಲಿ ತನ್ನನ್ನು ಕಲ್ಪಿಸಿಕೊಂಡು ಸಮಾಧಾನದ ನಿಟ್ಟುಸಿರಿಟ್ಟ, ಏಕೆಂದರೆ ಹುಡುಗಿ ಕಡುಕಪ್ಪು.

ನಂತರ ಆಗಮಿಸಿದ ವರನನ್ನು ನೋಡಿದ ಮೇಲಂತೂ " ಪಾಪ ಇಷ್ಟು ಚೆನ್ನಾಗಿರುವ ಹುಡುಗ ಜೀವಮಾನ ಪೂರ್ತ ಆ ಬಣ್ಣವೇ ಇಲ್ಲದ ಹುಡುಗಿಯೊಡನೆ ಕಳೆಯಬೇಕಲ್ಲ, ನಾನು ಮಾತ್ರ ಏನೇ ಆದ್ರೂ ಈ ತರಹದ ಹುಡುಗಿಯನ್ನು ಕಟ್ಕೊಳ್ಳಲ್ಲಪ್ಪ", ಎಂದೆಲ್ಲಾ ಚಿಂತಿಸುತ್ತಿದ್ದ. ಹುಡುಗ ಮಾತ್ರ ನಗುನಗುತ್ತಲೇ ವರಪೂಜೆಯಲ್ಲಿ ಭಾಗವಹಿಸಿದಾಗ ಸುಬ್ಬನಿಗೆ ಆಶ್ಚರ್ಯ, " ಅಲ್ಲ ಇವನಿಗೆ ಸ್ವಲ್ಪನಾದ್ರು ಬೇಜಾರಿಲ್ವ" ಎಂದು.

ಮಾರನೆಯ ದಿನ ಮದುವೆಯ ಮುಹೂರ್ತ ತಡವಾಗಿಯೇ ಇತ್ತು. ಯಾವುದೇ ಅವಸರವಿಲ್ಲದೆ ಸುಬ್ಬಾಜೋಯಿಸ್ ತನ್ನ ಕಾರ್ಯಕ್ಕೆ ಬೇಕಾದ ಸಿದ್ಧತೆಗಳನ್ನೆಲ್ಲಾ ಮಾಡಿಕೊಳ್ಳುತ್ತಿದ್ದ. ಮದುವೆ ಮನೆ ಹೆಣ್ಣಿನ ಕಡೆಯವರ ಕಲರವದಿಂದ ತುಂಬಿತ್ತು. ಗಂಡಿನವರು ಹಳ್ಳಿಯ ಗೌಡರ ವಿಶಾಲವಾದ ಮನೆಯಲ್ಲಿ ಇಳಿದುಕೊಂಡಿದ್ದರು.

ಆ ಊರಿನಲ್ಲಿ ಹಿರಿಯರಾದ ಗೌಡರೆಂದರೆ ದೇವರ ಸಮಾನ, ಅವರ ಮಾತು ಊರವರಿಗೆ ವೇದವಾಕ್ಯ. ಊರಿನಲ್ಲಿ ಯಾವುದೇ ಮದುವೆ ನಡೆದರೂ ಅಲ್ಲಿ ಮೊದಲ ಪ್ರಾಶಸ್ಯ ಗೌಡರದೇ. ಅದು ತಮ್ಮದೇ ಮಕ್ಕಳ ಮದುವೆ ಎನ್ನುವಷ್ಟು ಉತ್ಸಾಹದಿಂದ ಅವರು ಭಾಗವಹಿಸುತ್ತಿದ್ದರು. ಅವರ ಮಾತಿಗೆ ಯಾರೇ ಆಗಲಿ ತಲೆಬಾಗುತ್ತಿದ್ದರು. ಪ್ರೀತಿ ವಿಶ್ವಾಸ, ಆದರದಿಂದ ಎಂತಹವರನ್ನೇ ಆಗಲಿ ಒಲಿಸಿಕೊಳ್ಳುವ ನೈಪುಣ್ಯತೆ ಅವರಲ್ಲಿತ್ತು. ಆದರೆ ನ್ಯಾಯವಾದ ಅವರ ಮಾತಿಗೆ ಯಾರಾದರೂ ಎದುರಾಡಿದಾಗ ಅವರ ಗ್ರಹಚಾರ ಕೆಟ್ಟಂತೆಯೇ. ಅವರು ಸುಬ್ಬನ ತಂದೆಗೆ ಬಹಳ ಆಪ್ತರು, ಮತ್ತು ಸುಬ್ಬನನ್ನೂ ಚೆನ್ನಾಗಿ ಬಲ್ಲವರೇ.

ಎಲ್ಲರೂ ಗಂಡಿನ ಆಗಮನಕ್ಕಾಗಿ ಕಾಯುತ್ತಿದ್ದರು. ಕಾಶೀಯಾತ್ರೆಗೆ ಸಕಲ ಸಿದ್ಧತೆಯೂ ನಡೆದಿತ್ತು, ಗಂಡು ಗೌಡರ ಮನೆಯಿಂದ ಬಂದು ಅಲಂಕೃತನಾಗಿ ಹಸೆಗೆ ಬರುವುದೊಂದು ಬಾಕಿ.

ಆಗ ಧಾವಂತದಿಂದ ಧಾವಿಸಿಬಂದವರು ಗೌಡರು, ಮುಖದಲ್ಲಿ ಆತಂಕ ತುಂಬಿತ್ತು. ಅಲ್ಲಿದ್ದ ಬೇರಾರನ್ನೂ ಗಮನಿಸದೇ ವಧುವಿನ ತಂದೆಯನ್ನು ಹುಡುಕುತ್ತಾ ಹೋದರು. ಕೊಂಚವೇ ಸಮಯದಲ್ಲಿ ಮದುವೆ ಮನೆಯಲ್ಲಿ ಕೋಲಾಹಲ, ಹೆಂಗಸರ ಅಳು, ಗುಸುಗುಸು, ಪಿಸು ಪಿಸು ಮಾತುಗಳು. ಕಿವಿ ಮೇಲೆ ಬಿದ್ದ ಮಾತುಗಳಿಂದ, "ಗಂಡು ಕಾಣಿಸುತ್ತಿಲ್ಲ. ತನ್ನ ಗೆಳೆಯರೊಡನೆ ಪರಾರಿಯಾಗಿದ್ದಾನೆ" ಎಂದು ಸುಬ್ಬನಿಗೆ ಅರಿವಾಯಿತು.

"ಪಾಪ ಇನ್ನೇನು ಮಾಡ್ತಾನೆ, ಪರವಾಗಿಲ್ಲ ಬುದ್ಧಿವಂತಾನೆ ಇದ್ದಾನೆ, ನಾನೇನೋ ಅಂದ್ಕೊಂಡಿದ್ದೆ" ಎಂದೆಲ್ಲಾ ಯೋಚಿಸಿದರೂ, "ಛೇ, ನಾನು ಇಟ್ಟುಕೊಟ್ಟ ಮುಹೂರ್ತ ಹೀಗಾಯ್ತೇ, ಆ ಹುಡುಗೀಗೆ ಚೆನ್ನಾಗಿ ಹೊಂದೋ ತರ ಮುಹೂರ್ತಾನೆ ಇತ್ತು ಇವತ್ತು, ಪಾಪ, ಇಲ್ಲೀವರೆಗೂ ನಡೆದು ಹೀಗಾಗಬಾರದಿತ್ತು" ಅಂತ ಬೇಜಾರೂ ಮಾಡ್ಕೊಂಡ.

ಆ ನಂತರ ಹುಡುಗಿಯ ಅಣ್ಣ ಬಂದು ಹೇಳಿದಮೇಲೆ, ಹುಡುಗ ಮುಂಚೆಯೇ ಬೇರೊಬ್ಬಳನ್ನು ಪ್ರೀತಿಸಿದ್ದು, ತಂದೆ ತಾಯಿಯ ಭಯಕ್ಕೆ ನಾಟಕವಾಡಿ, ಅಂದು ಬೆಳಗ್ಗೆಯೇ ಬೇರೊಂದು ಕಡೆ ಆ ಹುಡುಗಿಯನ್ನು ಮದುವೆಯಾಗಿಬಿಟ್ಟ, ಎಂದು ತಿಳಿಯಿತು.

ಮುಂದಿನ ಪುಟ ನೋಡಿ ...

ಹೆಣ್ಣಿನ ತಂದೆತಾಯಿಯರು ಅವಮಾನ, ದುಃಖ, ಸಂಕಟಗಳಿಂದ ಬೇಯುತ್ತಿದ್ದರು. ಗೌಡರು ಕೋಪದಿಂದ ಸಿಡಿಯುತ್ತಿದ್ದರು.

"ಈಯಮ್ಮನ ತರ ಚಿನ್ನದಂತ ಹೆಣ್ಣನ್ನ ಮಾಡ್ಕೊಳ್ಳೋ ಭಾಗ್ಯ ಆ ಮುಠ್ಠಾಳಂಗೆ ಇಲ್ದೇ ಹೋಯ್ತು, ಬಿಡಿ ಸ್ವಾಮಿ, ನೀವಲ್ಲ ಬೇಜಾರ್ ಮಾಡ್ಕಬೇಕಾದೋರು, ಅವ್ರು. ಆ ಮನೆಗೆ ಇಂಥಾ ಸೊಸೆ ಸೇರೋ ಯೋಗ ಇರ್ಲಿಲ್ಲ ಬಿಡಿ" ಎಂದರು ಗೌಡ್ರು.

"ಆದ್ರೂ ಗೌಡ್ರೆ, ಇಲ್ಲೀವರ್ಗೂ ಬಂದು ಮದ್ವೆ ನಿಲ್ತಂದ್ರೆ ನಮ್ ಮರ್ಯಾದೆ ಏನಾಗ್ಬೇಕು ಹೇಳಿ. ಮತ್ತೆ ಇವಳನ್ನ ಯಾರು ಮಾಡ್ಕೊಳಕ್ಕೆ ಮುಂದೆ ಬರ್ತಾರೆ, ಇನ್ನೂ ಎಷ್ಟು ದಿನಾ ಕಾಯ್ಬೇಕೋ ಅಂಥ ಪುಣ್ಯಾತ್ಮ ಸಿಗಕ್ಕೆ. ಅಷ್ಟೇ ಅಲ್ಲ, ಈಗ ಮಾಡಿರೋ ಸಿದ್ಧತೆಗಳು, ಬಂದಿರೋ ನೆಂಟರಿಷ್ಟರು, ಖರ್ಚುಗಳು ಎಲ್ಲಾ ನಮಗೇನು ಸುಮ್ನೆ ಬರುತ್ತೇನು. ಹೊಳೆ ನೀರಲ್ಲಿ ಹುಣ್ಸೇಹಣ್ಣು ಹಿಂಡ್ದಂಗಾಯ್ತು. ಒಳ್ಳೆ ಮನೆ ಸೇರ್ತಾಳೆ, ಒಳ್ಳೆ ಹುಡುಗ ಸಿಕ್ಕಿದಾನೆ ಅಂತ ನನ್ನ ಹತ್ರ ಇದ್ದಬದ್ದ ಹಣಾನೆಲ್ಲಾ ಖರ್ಚು ಮಾಡ್ದೆ. ದುಡ್ಡೆಲ್ಲಾದ್ರೂ ಹೋಗ್ಲಿ ಈಗ ಆ ಹುಡುಗಿಗೆ ಆಗಿರೋ ಅವಮಾನಕ್ಕೆ ಏನಾದ್ರೂ ಹೆಚ್ಚು ಕಮ್ಮಿ ಮಾಡ್ಕೊಂಡ್ರೆ ಏನ್ಕಥೆ. ಅವಳಿಗೆ ಸಮಾಧಾನ ಹೇಗೆ ಹೇಳೋದ್ ನಾವು". ಕನ್ಯಾಪಿತೃಗಳ ದುಃಖ ಮಿತಿಮೀರಿತ್ತು.

"ಅಷ್ಟೊಂದ್ ನೊಂದ್ಕೋಬೇಡಿ ನೀವು, ನಿಮ್ಮಂತ ಒಳ್ಳೆ ಜನಕ್ಕೆ ಆ ಶಿವ ಮೋಸ ಮಾಡಾಕಿಲ್ಲ, ಈ ಊರಿನ್ ಜನಾನು ಕೈ ಬಿಡಾಕಿಲ್ಲ. ನಂಗೆ ವಸಿ ಟೈಮ್ ಕೊಡಿ. ಬಂದಿರೋ ಜನಾನ ಹಾಗೇ ಕಳಿಸ್ಬೇಡಿ ತೀಂಡಿ ಊಟ ಮಾಡ್ಕೊಂಡ್ ಹೋಗಕ್ಕೆ ಹೇಳಿ. ಅಂಗೇ ನೀವು ವಸಿ ಬನ್ನಿ ಏನ್ ಮಾಡಕಾಗ್ತದೆ ನೋಡಣ, ಅಂಗೇ ಆ ಜೋಯ್ಸ ಸುಬ್ಬಪ್ಪಂಗೆ ಹೋಗ್ಬುಡ್ಬೇಡಾಂತ ಹೇಳಿರಿ, ಶಿವಾ ಏನಾದ್ರು ಒಂದು ದಾರಿ ತೋರ್ಸಾನು".

ಗೌಡರ ಮಾತುಗಳು ವಧುವಿನ ತಂದೆಗೆ ಕಾರ್ಮೋಡದ ನಡುವೆ ಬೆಳ್ಳಿರೇಖೆಯಂತೆ ಕಂಡರೂ ಅದೆಲ್ಲಾ ಭ್ರಮೆಯೆಂದೇ ಭಾವಿಸಿ ಗೌಡರ ಮಾತಿಗೆ ವಿಧಿಯಿಲ್ಲದೆ ತಲೆಯಾಡಿಸಿದರು. ಗೌಡರು ಹೆಣ್ಣಿನ ತಂದೆ ಹಾಗೂ ಹಲವು ಹಿರಿಯರನ್ನು, ಹೆಣ್ಣು ಗೌರೀ ಪೂಜೆ ಮಾಡುತ್ತಿದ್ದ ಕೋಣೆಯಲ್ಲಿ ಸಭೆ ಸೇರಿಸಿದರು.

****

ತಿಂಡಿಗಳ ಮುಗಿಸಿಬಂದ ನೆಂಟರಿಷ್ಟರೆಲ್ಲರೂ ಏನಾದರೂ ಪವಾಡ ಜರುಗಬಹುದೇನೋ ಎಂದು ಎದುರು ನೋಡುತ್ತಲಿದ್ದರು, ಎಲ್ಲರ ಗಮನವೂ ಗೌಡರ ಕಡೆಯೇ.

ಸುಬ್ಬಾ ಜೋಯಿಸನು ಏನೊಂದೂ ತೋಚದೆ, ತಿಂಡಿ ತಿಂದು ಗೆಳೆಯರೊಡನೆ ಛತ್ರದ ಒಂದು ಮೂಲೆಯಲ್ಲಿ ಮಾತನಾಡುತ್ತಾ ಕುಳಿತಿದ್ದ. ಆ ವೇಳೆಗೆ ಅಲ್ಲಿಗೆ ಬಂದ ಹಿರಿಯರೊಬ್ಬರು, "ಜೋಯಿಸರೇ ಮಂಟಪಕ್ಕೆ ಬರಬೇಕಂತೆ, ಮದುವೆಯ ಕಲಾಪಗಳನ್ನು ಮುಂದುವರೆಸಬಹುದಂತೆ, ಗೌಡರು ಹೇಳುತ್ತಿದ್ದಾರೆ", ಎಂದರು.

ಅಲ್ಲಿದ್ದ ಎಲ್ಲರಿಗೂ ಪರಮಾಶ್ಚರ್ಯ, "ಓಡಿಹೋದ ಗಂಡೇನಾದರೂ ಹಿಂದಿರುಗಿ ಬಂದನೇ, ಅಥವಾ ಬೇರೆ ಯಾವುದಾದ್ರೂ ಗಂಡು ಸಿಕ್ಕಿತೇ" ಎಂದೆಲ್ಲಾ ಆ ಹಿರಿಯರನ್ನೇ ಕೇಳಿದರು.

" ನನಗೇನೂ ತಿಳಿಯದು, ಗೌಡರು ಎಲ್ಲರನ್ನೂ ಮತ್ತೆ ಕರೆಯಲು ಹೇಳಿದ್ದಾರೆ", ಎನ್ನುತ್ತಾ ಉಳಿದವರಿಗೆ ತಿಳಿಸಲು ಹೊರಟರು. ಸುಬ್ಬ ಮಂಟಪದ ಬಳಿಗೆ ಬರುವ ವೇಳೆಗೆ ಗೌಡರೇ ಎದುರು ಬಂದು,

"ಸುಬ್ಬಣ್ಣ, ಈಗಾಗ್ಲೇ ಹೊತ್ತು ಮೀರಿ ಹೋಗಿದೆ, ಚಿಕ್ಕದಾಗಿ ಕಾಶಿಯಾತ್ರೆ ಮುಗುಸ್ಬುಟ್ಟು, ಮುಂದಿನ ಶಾಸ್ತ್ರ ಶುರು ಮಾಡಣ ಅಲ್ಲವ್ರಾ", ಎಂದರು.

"ಸರಿ ಗೌಡರೆ, ನೀವು ಹೇಗೆ ಹೇಳಿದ್ರೆ ಹಾಗೆ, ಒಟ್ಟಿನಲ್ಲಿ ನಾನು ಇಟ್ಟುಕೊಟ್ಟ ಮುಹೂರ್ತ ಪ್ರಶಸ್ತವಾಗಿದೆ, ಹೌದು ಗೌಡ್ರೇ.. ಗಂಡು ಯಾರು? ಎಲ್ಲಿಂದ ಹುಡುಕಿದ್ರಿ? ಅದೇನೇ ಹೇಳಿ ಗೌಡ್ರೆ, ನೀವೊಬ್ರಿದ್ದುಟ್ರೆ ಸಾಕು, ಎಲ್ಲಾ ಕೆಲ್ಸಾನೂ ನಿರ್ವಿಘ್ನವಾಗಿ ನಡೆದು ಹೋಗುತ್ತೆ, ನಿಮ್ಮಂತೋರನ್ನ ನೋಡಿ ನಾವು ಕಲೀಬೇಕು", ಎಂದ ಸುಬ್ಬ.

"ನಂದೇನಿದೆ ಸುಬ್ಬಪ್ಪಾ, ಸಮಯ ಅಂದ್ರೆ ಎಲ್ರೂ ಮಾಡ್ಲೇ ಬೇಕು, ಈ ಟೈಮ್ನಾಗೆ ಆ ಶಿವ ಏನೋ ಒಂದು ಬೆಳಕು ತೋರುಸ್ದ, ನಾನೂ ಧೈರ್ಯ ಮಾಡಿವ್ನಿ, ಇನ್ಮುಂದೆ ಏನಿದ್ರೂ ನಿಮ್ದೇಯ, ಅಲ್ನೋಡಿ ನಿಮ್ಮಪ್ಪ ಅಮ್ಮಾವ್ರು ಬಂದ್ರು, ಸ್ನೇಯಿತ್ರ ಮಗಳ ಮದ್ವೆಗೆ ಅಂತ", ಗೌಡರು ಧಾವಂತದಿಂದ ಮಾತನಾಡುತ್ತ, "ಬೇಗ ತನ್ರಪ್ಪಾ ಕಾಶಿಯಾತ್ರೆ ಬೇಕಾದ್ದುನ್ನೆಲ್ಲ", ಎಂದರು.

ಸುಬ್ಬಾ ಜೋಯಿಸ ಹಾಕಿದ್ದ ಶರಟು ಕಳಚಿ, ಮೇಲುಹೊದಿಕೆ ಹೊದ್ದು ಗಂಡನ್ನು ಎದುರು ನೋಡುತ್ತಾ ತನ್ನ ಸ್ಥಾನದಲ್ಲಿ ಕುಳಿತ.

"ಸುಬ್ಬಣ್ಣ, ನೀನು ಈಗ ಅಲ್ಲಲ್ಲಪ್ಪ ಕೂತ್ಕೋಬೇಕಾಗಿರಾದು, ಇಲ್ಲಿ ಬಾ" ಎಂದು ಗೌಡರು ಗಂಡು ಕುಳಿತುಕೊಳ್ಳುವ ಜಾಗವನ್ನು ತೋರಿಸಿದರು.

ಸುಬ್ಬಣ್ಣ ಇವರ್ಯಾಕೆ ಹೀಗೆ ಹೇಳುತ್ತಿದ್ದಾರೆಂದು ತಿಳಿಯದೆ "ಇಲ್ಲ ಗೌಡ್ರೆ ಇದೇ ಸರಿಯಾದ ದಿಕ್ಕು, ಗಂಡು ಆ ಕಡೆ, ಪುರೋಹಿತ್ರು ಈ ಕಡೇನೆ ಕೂತ್ಕೋಬೇಕು" ಎಂದ.

ಮುಂದಿನ ಪುಟ ನೋಡಿ ...

ಗಂಭೀರವಾದ ಧ್ವನಿಯಲ್ಲಿ ಗೌಡ್ರು " ಹೌದು ಸುಬ್ಬಣ್ಣ, ನಾನೂ ಅದೇ ಹೇಳ್ತಿರೋದು, ಗಂಡು ನೀನು ಆ ಕಡೆ ಕೂತ್ಕೋ, ಪುರೋಹಿತ್ರು, ಅಂದ್ರೆ ನಿಮ್ಮಪ್ಪ ಈ ಕಡೆ ಕೂತ್ಕೋತಾರೆ ಅಂತ".

" ಏನು, ನಾನೇನಾ ಮದುವೆ ಗಂಡು? ಏನ್ಹೇಳ್ತಿದ್ದೀರಾ ನಂಗರ್ಥ ಆಗ್ತಿಲ್ಲಾ, ಈ ಹೆಣ್ಣನ್ನ ನಾನು ಮದ್ವೆ ಮಾಡ್ಕೋಬೇಕಾ? ಯಾರು ಹೇಳಿದ್ದು? ನನ್ನನ್ನ ನೀವೇನಾದ್ರೂ ಕೇಳಿದ್ರಾ?"

"ಸುಬ್ಬಣ್ಣಾ ನಾನೇ ನಿರ್ಧಾರ ಮಾಡಿರೋದು, ನಿನ್ ಬಗ್ಗೆ ನಂಗೆ ಚೆನ್ನಾಗೇ ಗೊತ್ತು, ನಿಮ್ಮಪ್ಪ ಅಮ್ಮಂಗೂ ನನ್ನ ನಿರ್ಧಾರದಿಂದ ಸಂತೋಷಾನೆ ಆಗಿದೆ. ಆ ತಲೆಮಾಸಿದ ಗಂಡು ಓಡಿ ಹೋಗಿ ಒಳ್ಳೆ ಕೆಲ್ಸಾನೆ ಮಾಡಿದ್ದಾನೆ. ಸರಿಸರಿ ಮಾತೆಲ್ಲಾ ಆಮೇಲೆ ಆಗ್ಲಿ, ಮೊದ್ಲು ಕೆಲ್ಸ ನಡೀಲಿ", ತೀರ್ಮಾನವಿತ್ತರು ಗೌಡರು.

ಅಪ್ಪ ಅಮ್ಮನ ಕಡೆ ನೋಡಿದ ಸುಬ್ಬಣ್ಣ, ಅವರಿಬ್ಬರ ಮುಖ ಸಂತೋಷದಿಂದ ಮಲ್ಲಿಗೆಯಂತೆ ಅರಳಿತ್ತು. ಸುತ್ತಲೂ ನೆರೆದಿದ್ದ ಜನರ ಕಡೆ ನೋಡಿದ ಸುಬ್ಬ, ಸ್ವಲ್ಪ ಹೊತ್ತಿಗೆ ಮುಂಚೆದ್ದ ದುಃಖದ ಛಾಯೆ ಯಾರಲ್ಲೂ ಕಾಣಲಿಲ್ಲ, ಎಲ್ಲರೂ ಮುಂಚೆಗಿಂತಲೂ ಸಂತೋಷವಾಗಿದ್ದರು. ಯಾರಿಂದಲೂ ತನಗೆ ಬೇಕಾದ ಸಹಾಯ ಸಿಗುವ ಹಾಗೆ ಕಾಣಲಿಲ್ಲ.

ಕೋಪದಿಂದ ನಡುಗುತ್ತಾ ಸುಬ್ಬ ಜೋರಾಗಿ ಕೂಗಿದ " ಇಲ್ಲಾ ಇಲ್ಲ. ನಾನು ಆ ಕಪ್ಪು ಹುಡುಗೀನ ಮದ್ವೆ ಆಗಲ್ಲ, ಆ ಹುಡುಗೀನ ಕರೀರಿ ಹೇಳ್ತೀನಿ".

"ಸುಬ್ಬಣ್ಣಾ, ನಂಗೆಲ್ಲಾ ಗೊತ್ತು, ಆಯಮ್ಮ ನಿಂಗಿಂತಾ ಜಾಣೆ, ಆಯಮ್ಮಾನೆ ನಿನ್ ಬಗ್ಗೆ ನಂಗೆ ಸೂಚನೆ ಕೊಟ್ಟಿದ್ದು ಕೂಡ, ನೀನಿಂಗೇ ಹೇಳ್ತಿಯ ಅಂತ ಕೂಡ ಹೇಳಿದ್ದು. ಮರ್ವಾದೆ ಇಲ್ದೋಳು ಅನ್ಬೇಡ, ಹಿರೀರೆಲ್ಲ ಒಪ್ಕೊಂಡ್ರೆ ಮುಂದುವರೆಸಿ ಅಂತ ಕೂಡ ಹೇಳಿದ್ದು, ನೀನೇನಂತೀಯಾ?"

ಅಸಹಾಯಕತೆ, ಕೋಪದಿಂದ, ತನ್ನ ಕನಸಿನ ಗೋಪುರ ಕುಸಿದು ಹೋಗುತ್ತಿರುವ ದುಃಖದಿಂದ ಕುದಿಯುತ್ತಿದ್ದ ಸುಬ್ಬನಿಗೆ ಮಾತನಾಡಲಾಗಲೇ ಇಲ್ಲ.

" ನೋಡು ನೀನು ಹುಡುಗಿ ಅಂದ್ಮಾಗಿರ್ಬೇಕು ಅಂತ ಕಾಯ್ತಾ ಇದ್ದೀಯಾ ಅಂತ ಗೊತ್ತಾಯ್ತು. ಅಲ್ಲ ನೀನು ಇಷ್ಟೆಲ್ಲಾ ಒದ್ದೋನು, ತಿಳ್ಕಂಡಿರೋನು, ಜೀವ್ನ ನಡ್ಸಾಕ್ಕೆ ರೂಪ ಅಲ್ಲ ಗುಣ ಮುಖ್ಯ ಅಂತ ತಿಳ್ಕಂಡಿಲ್ಲ ಅನ್ನೋದೆ ಆಶ್ಚರ್ಯ. ನೋಡು ನೀನೀ ಹುಡ್ಗೀನ ಮಾಡ್ಕಂಡ್ರೆ ಸುಖ್ವಾಗಿರ್ತೀಯ ಅಂತ ನಿಮ್ಮಪ್ಪ ಅಮ್ಮಾನೆ ಹೇಳ್ತಾ ಅವ್ರೆ. ನೋಡು ಹೆಚ್ಗೆ ಮಾತಾಡಾಕೆ ಟೈಮಿಲ್ಲ, ಹಿರೀರೆಲ್ಲ ಸೇರಿ ತೀರ್ಮಾನ ಮಾಡ್ಬುಟ್ಟಿದ್ದೀವಿ, ಜಾಣನ್ ಹಂಗೆ ಒಳ್ಳೆ ಮಾತ್ನಾಗ್ ಕೇಳ್ತೀಯೋ, ಆಥ್ವಾ ದಡ್ಡನಾದ್ರೆ ಬಲ ಪ್ರಯೋಗಕ್ಕೆ ನಾನು ಸಿದ್ಧನಾಗೀವ್ನಿ. ಒಟ್ನಾಗ್ ಈ ಮದ್ವೆ ನಡ್ದೇ ತೀರುತ್ತೆ. ಒಂದ್ ಮಾತ್ನ ತಿಳ್ಕ, ಇಲ್ಲಿರೋರೆಲ್ಲ ನಿಂಗ್ ಒಳ್ಳೇದ್ ಬಯಸೋರೇನೆ, ಅರ್ಥ ಮಾಡ್ಕ". ಗೌಡರು ಮಾತು ನಿಲ್ಲಿಸಿ ಸುಮ್ಮನಾದರು.

****

"ಸ್ವಲಗ್ನಾ ಸಾವಧಾನ, ಎನ್ನುವಂತೆ ನನ್ನ ಮದುವೆಗೆ ನಾನೇ ಮಹೂರ್ತವಿಟ್ಟುಕೊಂಡೆ, ನಾನೇ ಪುರೋಹಿತನೂ ಆಗಿಹೋಗಿದ್ದೆ. ಅಂದೇನಾದರೂ ನಾನು ಆ ಹಿರಿಯ ಗೌಡರ ಮಾತಿಗೆ ತಲೆಬಾಗಿ ಆ ಕಪ್ಪು ಹುಡುಗಿಯನ್ನು ಕಟ್ಟಿಕೊಳ್ಳದಿರುತ್ತಿದ್ದರೆ, ನನ್ನ ಬಾಳಿನಲ್ಲಿ ಎಂತಹ ಅಮೂಲ್ಯವಾದ ವಸ್ತು ನನಗೆ ದೊರೆಯದೆ ಹೋಗುತ್ತಿತ್ತು". ಎನ್ನುತ್ತಾ ತಮ್ಮ ಕಥೆಯನ್ನು ನಮಗೆಲ್ಲಾ ಹೇಳಿ ಮುಗಿಸಿದ ಮಾವಯ್ಯ, ಅತ್ತೆಯ ಕಡೆ ನೋಡುತ್ತಿದ್ದ ನೋಟದಲ್ಲಿ ಧನ್ಯತೆಯ ಭಾವ ತುಂಬಿತ್ತು. ಅತ್ತೆಯ ನಗುವಲ್ಲಿ ತುಂಟ ಕಳೆ ಕಂಡಿತ್ತು. ▪

ವಿಜ್ಞಾನ

ಸೋಪಿನೊಡನೆ ದೋಣಿಯಾಟ

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

- ಫೋಮಿನ ಒಂದು ತುಂಡು (FOAM)
- ಒಂದು ಟ್ರೇನಲ್ಲಿ ನೀರು
- ಪಾತ್ರೆ ತೊಳೆಯುವ ದ್ರವ (Dishwashing liquid)





ವಿಧಾನ:

- ಚಿತ್ರದಲ್ಲಿ ತೋರಿಸಿರುವಂತೆ ಫೋಮ್ ಕತ್ತರಿಸಿ
- ಕತ್ತರಿಸಿದ ಜಾಗದಲ್ಲಿ ಲಿಕ್ವಿಡ್ ಸೋಪ್ ಅನ್ನು ಹಚ್ಚಿ
- ನಾಜೂಕಾಗಿ ಈ ತುಂಡನ್ನು ಈಗ ನೀರಿನಲ್ಲಿ ತೇಲಿಬಿಟ್ಟು, ಅದು ಅಲ್ಲಿಂದಿಲ್ಲಿಗೆ ಹರಿದಾಡುವುದನ್ನು ಕಾಣಿರಿ

ಏನಾಗುತ್ತಿದೆ:

ಲಿಕ್ವಿಡ್ ಸೋಪ್ ಒಂದು ಸರ್ಫಾಕ್ಟಂಟ್ ಆಗಿದೆ. ಅಂದರೆ ನೀರಿನ ಮೇಲ್ಮೈ ಒತ್ತಡವನ್ನು ತೊಡೆದು ಹಾಕುವಂತಹದ್ದು. ಇಂತಹ ದ್ರವವನ್ನು ಆ ದೋಣಿಯಾಕಾರದ ಫೋಮ್ ತುಂಡಿಗೆ ಹಚ್ಚಿ ನೀರಿನಲ್ಲಿ ಬಿಟ್ಟಾಗ, ನೀರಿನ ಮೇಲ್ಮೈ ಒತ್ತಡವು ಮುರಿದು ಬೀಳುತ್ತದೆ. ಇದರಿಂದ ಒಂದಷ್ಟು ರಭಸವು ಉತ್ಪತ್ತಿಯಾಗುತ್ತದೆ. ಈ ರಭಸವು, ಅಷ್ಟೇನೂ ಭಾರವಿಲ್ಲದ ಫೋಮ್ ಅನ್ನು ತಳ್ಳುತ್ತದೆ. ಹೀಗಾಗಿ ಆ ಫೋಮ್ ತುಂಡು ಅಲ್ಲಿಂದಿಲ್ಲಿಗೆ ಓಡಾಡುತ್ತದೆ. ▪

ಜಾಣ ಕರ್ನಾಟಕ – ಉತ್ತರ

ಮೊದಲನೆಯ ಜೋಡಿ- ಕುವೆಂಪು -೧೯೫೫ರಲ್ಲಿ ರಾಮಾಯಣದರ್ಶನಂ ಕೃತಿಗಾಗಿ,
ಕೆ.ಪೂರ್ಣಚಂದ್ರ ತೇಜಸ್ವಿ ೧೯೮೭ರಲ್ಲಿ - ಚಿದಂಬರ ರಹಸ್ಯ ಕೃತಿಗಾಗಿ.
ಎರಡನೆಯ ಜೋಡಿ – ಡಿ.ವಿ.ಗುಂಡಪ್ಪ – ೧೯೬೭ರಲ್ಲಿ ಶ್ರೀಮದ್ ಭಗವದ್ಗೀತಾತಾತ್ಪರ್ಯ ಅಥವಾ ಜೀವನಧರ್ಮಯೋಗ ಕೃತಿಗಾಗಿ.
ಬಿ.ಜಿ.ಎಲ್.ಸ್ವಾಮಿ – ೧೯೭೮ರಲ್ಲಿ ಹಸುರುಹೊನ್ನು ಕೃತಿಗಾಗಿ.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ರಾಮನವಮಿ

ಏಪ್ರಿಲ್ ೧೪, 2016 ಬೆಳಿಗ್ಗೆ ೦೯:೩೦ ಕ್ಕೆ

Shri Shiv Mandir, 201, Eaglevale Raod, Minto

ಹೆಚ್ಚಿನ ಮಾಹಿತಿಗಾಗಿ ನೋಡಿ

http://www.friendsofindia.com.au/

ಸಿಡ್ನಿ ಕನ್ನಡ ಶಾಲೆ ಅರ್ಪಿಸುವ

ಯುಗಾದಿ ಹಬ್ಬ, ಕನಕ ನಮನ,

ಕೆ.ಎಸ್. ನ. ನಮನ, ಕನ್ನಡ ಕ್ಯಾರೆಯೋಕೆ

23/04/2016 ಸಂಜೆ 5:30 ಕ್ಕೆ

Wattle Grove Public School, cressbrook Drive, Wattle Grove NSW 2173
Book your seats - sugamakananda@gmail.com
Entry $20 per Family (Dinenr included)

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ
ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ
ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ
ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.